# 8

# ತಂದೆ ತಾಯಿಗಳಿಗೆ ನಾವುಗಳು ತೀರಿಸ ಬೇಕಾದ ಏಳು ಸಾಲಗಳು

ವಾಕ್ಯಭಾಗ: ಎಫೆಸ 6:1-4.

ಈ ನಮ್ಮ ಅಧ್ಯಯನಗಳಲ್ಲಿ, ಕುಟುಂಬದ ಕುರಿತು ಸಾಧಾರಣವಾಗಿ ಅಭ್ಯಾಸಿಸಿದ್ದೇವೆ. ಪತಿ/ಪತ್ನಿಯ ಕುರಿತು ಚರ್ಚಿಸಿದ್ದೇವೆ, ಪೋಷಕರ ಹಾಗೂ ಮಕ್ಕಳ ಸಂಬಂಧವಾಗಿ ಮಾತನಾಡಿದ್ದೇವೆ. ಇದರಲ್ಲಿ ಪೋಷಕರ ಜವಾಬ್ದಾರಿಯನ್ನು ಒತ್ತಿ ಹೇಳಿದ್ದೇವೆ. ಈ ಕೊನೆಯ ಪಾಠದಲ್ಲಿ ಮಗುವಿನ ಜವಾಬ್ದಾರಿಯ ಕುರಿತು ವಿವರಿಸುತ್ತೇನೆ. "ತಂದೆ ತಾಯಿಗಳಿಗೆ ನಾವುಗಳು ತೀರಿಸಬೇಕಾದ ಏಳು ಸಾಲಗಳು" ಎಂಬ ವಿಷಯವನ್ನು ನೋಡೋಣ.[1]

ಕೆಲವರು ತಂದೆ ತಾಯಿಗಳಿಗೆ ನಾವು ಯಾವ ಸಾಲವನ್ನು ತೀರಿಸಬೇಕಿಲ್ಲ ಎಂದು ಹೇಳುತ್ತಾರೆ. ಕೆಲವು ವರ್ಷಗಳ ಹಿಂದೆ, ಒಂದು ಚಲನ ಚಿತ್ರದಲ್ಲಿ, ತಂದೆಯು ಅವನಿಗೆ ಸನ್ಮಾನವು ಬರುವದಿದೆ ಎಂದು ಅಪೇಕ್ಷಿಸಿದ್ದನು. ಅವನ ಬೆಳೆದ ಮಗನು ನಾನು ತಂದೆಗೆ ಏನನ್ನು ನೀಡಬೇಕಾಗಿಲ್ಲ. ಯಾಕೆಂದರೆ ನಾನು ಕೇಳಿಕೊಂಡು ಈ ಭೂಲೋಕಕ್ಕೆ ಬರಲಿಲ್ಲ, ಮತ್ತು ಅವನ ಅಸ್ತಿತ್ವಕ್ಕೆ ತಂದೆಯೇ ಕಾರಣನಾಗಿರುವದರಿಂದ, ತಂದೆಯೇ ಅವನಿಗೆ ಸಾಲಗಾರನಾಗಿದ್ದನು ಎಂದು ತಿಳಿಸಿದನು.

ಬೈಬಲ್ ಬೋಧನೆಗಳು ಒಮ್ಮುಖವಾಗಿರುವದಿಲ್ಲ. ಹೌದು ತಂದೆ ತಾಯಿಗಳು ಮಕ್ಕಳಿಗೆ ಹೆಚ್ಚು ನೀಡಲೇಬೇಕು ಎಂದು ಬೈಬಲ್ ತಿಳಿಸುತ್ತದೆ. ಯಾಕೆಂದರೆ ಮಕ್ಕಳ ಅಸ್ತಿತ್ವಕ್ಕೆ ಅವರೇ ಕಾರಣವಾಗಿದ್ದಾರೆ. ಮತ್ತು ಮಕ್ಕಳು ಸಹ ತಂದೆ ತಾಯಿಯರಿಗೆ ಅಭಾರಿಯಾಗಿರಬೇಕು. ಯಾಕೆಂದರೆ, ಅವರಿಲ್ಲದೆ ಮಕ್ಕಳು ಜೀವಿಸಲು ಅಸಾಧ್ಯ. ಜೀವವರವು ವಿಶೇಷವಾದ ವರವಾ ಗಿರುತ್ತದೆ.

ಆದುದರಿಂದ ಎಫೆಸ 6:1-4 ಪೋಷಕರಿಗೂ, *ಮತ್ತು* ಮಕ್ಕಳಿಗೂ ಸವಾಲಿನ ವಾಕ್ಯವಾ ಗಿರುತ್ತದೆ:

> ಮಕ್ಕಳೇ, ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆ ತಾಯಿಗಳ ಮಾತನ್ನು ಕೇಳಬೇಕು; ಇದು ಧರ್ಮ. ವಾಗ್ದಾನಸಹಿತವಾದ ಮೊದಲನೆಯ ಆಜ್ಞೆಯನ್ನು ಕೇಳಿರಿ - ನಿನ್ನ ತಂದೆ ತಾಯಿಗಳನ್ನೂ ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನಗೆ ಮೇಲಾ ಗುವದು, ನೀನು ಭೂಮಿಯ ಮೇಲೆ ಬಹುಕಾಲ ಬದುಕುವಿ. ತಂದೆಗಳೇ, ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸದೆ ಕರ್ತನಿಗೆ ಮೆಚ್ಚಿಗೆಯಾಗಿರುವ ಬಾಲಶಿಕ್ಷೆಯನ್ನೂ ಬಾಲೋಪದೇಶವನ್ನೂ ಮಾಡುತ್ತಾ ಅವರನ್ನೂ ಸಾಕಿ ಸಲಹಿರಿ (ಎಫೆಸ 6:1-4).

ಮಕ್ಕಳಿಗೆ ಮಾತ್ರ ಜವಾಬ್ದಾರಿ ಇರುತ್ತದೆ ಎಂದು, ಕೆಲವು ಪೋಷಕರು ತಿಳಿಯುತ್ತಾರೆ. ಕೆಲವು ಮಕ್ಕಳು ಪೋಷಕರಿಗೆ ಮಾತ್ರ ಜವಾಬ್ದಾರಿ ಇರುತ್ತದೆ ಎಂದು ತಿಳಿಯುತ್ತಾರೆ. ಈ ಎರಡೂ ಮನೋಭಾವನೆಗಳೂ ಸರಿಯಲ್ಲ. ಈಗಾಗಲೇ ಮಕ್ಕಳನ್ನು ಸಾಕಿ ಸಲಹೆ, ತರಬೇತಿ ನೀಡುವ ಜವಾಬ್ದಾರಿ ಪೋಷಕರದ್ದಾಗಿದೆ ಎಂದು ಅಭ್ಯಸಿಸಿದ್ದೇವೆ. ಇದಕ್ಕೆ ಪ್ರತಿಯಾಗಿ, ನಮ್ಮ ತಂದೆ

ತಾಯಿಗಳಿಗೆ ನಾವು ಏನನ್ನು ನೀಡಬೇಕು?[2]

## ನಮ್ಮ ಶ್ಲಾಘನೆ (ಗೌರವ)

ಜನರು, ದೇವರನ್ನು ತೊರೆದು ಹೋಗುವ ಕುರಿತು ಪೌಲನು ಮಾತನಾಡಿ, ಅವರು ಹೇಗೆ ದೇವರನ್ನರಿಯದವರಾದರು ಎಂದು ಸೂಚಿಸಿದ್ದಾನೆ: "ಜನರು ಆತನನ್ನು ... ಸ್ತುತಿಸಲಿಲ್ಲ" (ರೋಮಾಪುರ 1:21).

ನಾವು ಯಾರಿಗಾದರು ಕೃತಜ್ಞರಾಗ ಬೇಕಾಗಿದ್ದರೆ, ಮೊದಲು ಪೋಷಕರಿಗೆ ಕೃತಜ್ಞರಾಗಿರಬೇಕು. ಅವರು ನಮಗೆ ಜೀವವರವನ್ನು ನೀಡಿದ್ದಾರೆ ಎಂದು ನಾನು ಈಗಾಗಲೇ ತಿಳಿಸಿದ್ದೇನೆ. ಅವರು ನಮ್ಮನ್ನು ಪ್ರೀತಿಸಿ, ನಮಗೋಸ್ಕರ ಚಿಂತಿಸುತ್ತಾರೆ.[3]

ಒಂದು ಸಾರಿ ಪೆನ್ ಸ್ಟೇಟ್ ಯುನಿವರ್ಸಿಟಿಯಲ್ಲಿ, ಬರ್ಗೆನ್ ಇವಾನ್ಸ್‌ವರರು, ಪದವೀದರರಾಗುತ್ತಿರುವರೊಂದಿಗೆ ಮಾತನಾಡುತ್ತಿದ್ದರು. ಹಿಂದಿನ ಜನಾಂಗದವರ ಸಾಧನೆಗಳ ಬಗ್ಗೆ ನಕರಾತ್ಮಕವಾಗಿದ್ದ ಜನರೊಂದಿಗೆ ಅವರು ಮಾತನಾಡುತ್ತಿದ್ದರು. ಪ್ರಪಂಚದ ಎಲ್ಲಾ ಕೆಟ್ಟ ಕಾರ್ಯಗಳಿಗೆ, ಅವರ ತಂದೆ ತಾಯಿಗಳೇ ಕಾರಣ ಎಂದು ಆಕ್ಷೇಪಿಸುತ್ತಿದ್ದರು. ಅವರ ಭಾಷಣದಲ್ಲಿ, ಜೀವನದ ಉದ್ದಾರವನ್ನು ಅಭಿವೃದ್ಧಿಯ ಪಥದೆಡೆಗೆ ನಡೆಸಲು, ತಂದೆ ತಾಯಿಗಳೇ ಕಾರಣರಾಗಿದ್ದಾರೆ, ಮತ್ತು ಕೆಲಸದ ಅವಧಿಯನ್ನು ಕಡಿಮೆಗೊಳಿಸಿ, ಮಕ್ಕಳು ನೆನಸದ ರೀತಿಯಲ್ಲಿ ಉತ್ತಮ ಹಾಗೂ ಆರೋಗ್ಯಕರವಾದ ಪ್ರಪಂಚವನ್ನು ನೀಡಿದ್ದಾರೆ.[4] ತಂದೆ ತಾಯಿಗಳು ಮತ್ತು ಅವರ ಹಿಂದಿನ ಜನಾಂಗವರು ಮಾಡಿದ ತ್ಯಾಗದ ಕುರಿತಾಗಿಯು ಮಾತನಾಡಿದರು, ಹಾಗೂ ಹಿಂದಿನ ಸಂತತಿಯವರು, ಮುಂದಿನ ಪೀಳಿಗೆಯವರ ಜೀವನ ಕ್ರಮವು ಉತ್ತಮವಾಗಿರಬೇಕು ಎಂದು ಶ್ರಮಿಸಿದರು.

"ಯಾಕೆಂದರೆ ಅವರು ನಿಮಗೆ ಉತ್ತಮವಾದದನ್ನು ನೀಡಿದ್ದರಿಂದಲೇ, ನೀವು ಇಷ್ಟು ಎತ್ತರವಾಗಿದ್ದೀರಿ, ಪೂರ್ಣ ಆರೋಗ್ಯವಂತರಾಗಿರುವಿರಿ, ಹೊಳೆಯುವವರಾಗಿದ್ದೀರಿ, ಬಹುಶಃ ಈ ಭೂಮಂಡಲದಲ್ಲಿ ಉತ್ತಮವಾಗಿ ಕಾಣುವ ಜನಾಂಗವಾಗಿರುವಿರಿ" ಎಂದು ತಮ್ಮ ಕೇಳುಗರಿಗೆ ಹೇಳಿದರು. ಮತ್ತು ತಂದೆ ತಾಯಿಗಳ ಪ್ರಯತ್ನದಿಂದಲೇ, "ನೀವು ಕೆಲವು ಗಂಟೆ ಮಾತ್ರ ಕೆಲಸ ಮಾಡುತ್ತಿರುವಿರಿ, ಹೆಚ್ಚು ಕಲಿಯುತ್ತಿರುವಿರಿ, ಹೆಚ್ಚು ವಿಶ್ರಾಂತಿಯ, ಸಮಯಲಭಿಸಿದೆ ದೂರ ಸ್ಥಳಗಳಿಗೆ ಹೆಚ್ಚು ಪ್ರವಾಸ ಮಾಡಲು ಸಾಧ್ಯವಾಯಿತು, ಮತ್ತು ನಿಮ್ಮ ಜೀವನದ ಆಶೆ - ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಅವಕಾಶವಾಯಿತು ಎಂದು ಅವರು ನೆನಪು ಮಾಡಿದರು."

ಮತ್ತು ಅವರು ಈ ಕೆಳಕಂಡ ಆಲೋಚನೆಗಳಿಂದ ಸಮಾಪ್ತಿ ಮಾಡಿದರು: "ಒಂದು ವೇಳೆ ನಮ್ಮ ಹಿಂದಿನ ಎರಡು ಸಂತತಿಗಳು ಇಷ್ಟೊಂದು ಪ್ರಗತಿಯನ್ನು ಸಾಧಿಸಿರುವಾಗ, ಅವರ ನಂತರದ ಸಂತತಿಗಳಾದ ನೀವು ಭೂಮಿಯಲ್ಲಿ ಇನ್ನು ಉಳಿದಿರುವ ಪ್ರಗತಿಯನ್ನು ಇನ್ನೂ ಎಷ್ಟೊ ಹೆಚ್ಚಾಗಿ ಮಾಡಬೇಕಲ್ಲವೇ ... ಆದರೆ ಅದು ಅಷ್ಟು ಸುಲಭವಲ್ಲ. ಅದನ್ನು ನೀನು ನಕರಾತ್ಮಕವಾಗಿರುವದರಿಂದ, ಇಲ್ಲವೇ ಹರಿದು ಹಾಕುವದರಿಂದ ಅಥವ ಕೀಳು ಮಟ್ಟದ ಯೋಚನೆಯಿಂದಾಗಲಿ ಸಾಧಿಸಲು ಸಾಧ್ಯವಿಲ್ಲ. ಆದರೆ ಕಷ್ಟಪಟ್ಟು ಕೆಲಸ ಮಾಡುವದರಿಂದ, ಮಾನವೀಯತೆಯಿಂದ ಮತ್ತು ಮನುಷ್ಯರಲ್ಲಿ ಇಟ್ಟಿರುವ ವಿಶ್ವಾಸದ ಮೂಲಕವಾಗಿ ಸಾಧಿಸಬಹುದು."[5]

ನಮ್ಮ ಪೋಷಕರು ನಮ್ಮನ್ನು ಪರಿಪೂರ್ಣವಾದ ಪ್ರಪಂಚಕ್ಕೆ ಪರಿಚಯಿಸಲಿಲ್ಲ. ಹೇಗೂ ಈ ಪ್ರಪಂಚವು ಪಾಪದಿಂದ ತುಂಬಿರುತ್ತದೆ (ಆದಿಕಾಂಡ 3:17, 18). ಆದರೆ ನಾವು ನಿತ್ಯತ್ವಕ್ಕೆ ಹೋಗುವವರೆಗೆ, ಪ್ರಪಂಚದಲ್ಲಿ ಜೀವಿಸಲು ಇದು ಕೆಟ್ಟ ಸ್ಥಳವಾಗಿರುವದಿಲ್ಲ. ನಾವು ಇದನ್ನು ಕೊಂಚ ಸನ್ಮಾನಿಸುವದಕ್ಕೆ ಹಿಂದಿನ ಸಂತತಿಯೇ ಕಾರಣವಾಗಿರುತ್ತದೆ. ಮಾನಸಿಕ ಶಾಸ್ತ್ರದ ಪ್ರಕಾರ, ಪ್ರತಿ ಮನುಷ್ಯನಿಗೂ ತನ್ನಲ್ಲಿ ಮಾನವೀಯ ಮೌಲ್ಯಗಳು ಇವೆ ಎಂಬದನ್ನು

ಇತರರು ತಿಳಿಯಬೇಕು ಎಂಬ ಭಾವನೆಗಳಿರುತ್ತವೆ, ಮತ್ತು ಇತರರು ಶ್ಲಾಘಿಸಬೇಕು ಎಂದು ಸಹ ಭಾವಿಸುತ್ತಾರೆ. ಬೈಬಲ್ ಈ ತತ್ವವನ್ನು ಒಪ್ಪದೆ ಇರುವದಿಲ್ಲ.[6] ನೀನು ನಿನ್ನ ಪೋಷಕರನ್ನು ಶ್ಲಾಘನೆ ಮಾಡಿದ್ದೀಯೋ? ನಿನಗೆ ಅವರು ಮಾಡಿರುವ ಎಲ್ಲಾ ಕಾರ್ಯಗಳನ್ನು ಮೆಚ್ಚಿಕೊಂಡಿರುವೆಯಾ? ಅವರನ್ನು ನೀನು ಶ್ಲಾಘಿಸುತ್ತಿರುವಿ ಎಂದು ತಿಳಿಸಿರುವೆಯಾ?

## ನಮ್ಮ ಸನ್ಮಾನ

ತಂದೆ ತಾಯಿಗಳನ್ನು ನಾವು ಸನ್ಮಾನಿಸಲೇಬೇಕು - ಯಾವಾಗಲು ಅವರು ಸರಿಯಾಗಿಯೇ ಇರುವರು ಎಂಬ ಕಾರಣದಿಂದಲ್ಲ. ಯಾಕೆಂದರೆ ಅವರು ನಮ್ಮ ತಂದೆ ತಾಯಿಗಳು ದಶಾಜ್ಞೆಗಳಲ್ಲಿ ಈ ಮೂಲ ತತ್ವವನ್ನು ಹಲವಾರು ವರುಷಗಳ ಹಿಂದೆಯೇ ತಿಳಿಸಲಾಗಿದೆ: "ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನ್ನ ದೇವರಾದ ಕರ್ತನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹಳ ಕಾಲ ಇರುವಿ" (ವಿಮೋಚನಕಾಂಡ 20:12). "ಸನ್ಮಾನ" ಎಂಬ ಪದದಲ್ಲಿ ಗೌರವಕ್ಕೆ ಸಂಬಂಧಿಸಿರುವ ಎಲ್ಲಾ ವಿಷಯಗಳು ಅಡಕವಾಗಿವೆ. ಯಾಜಕಕಾಂಡದಲ್ಲಿ ಈ ಅಪ್ಪಣೆಯು ಪುನರಾವರ್ತನೆಯಾದಾಗ, ಯಾಜಕಕಾಂಡ 19:3, "ಪ್ರತಿಯೊಬ್ಬನು ತನ್ನ ತಾಯಿ ತಂದೆಗಳ ವಿಷಯದಲ್ಲಿ *ಭಯಭಕ್ತಿ*ಯಿಂದ[7] ನಡೆದುಕೊಳ್ಳಬೇಕು" ಎಂಬುದಾಗಿದೆ. (ಒತ್ತಿ ಹೇಳಿದ್ದು ನನ್ನದು.)

ವಿಧೇಯ ಮಕ್ಕಳಿಗೆ ಆಶ್ಚರ್ಯಕರವಾದ ಲಾಭವು ಸಹ ಈ ಅಪ್ಪಣೆಯಲ್ಲಿ ಸೇರ್ಪಟ್ಟಿರುತ್ತದೆ: "ನೀನು ಬಹಳ ಕಾಲ ಇರುವಿ" ನಿಮ್ಮ ದಿವಸಗಳು "ಹೆಚ್ಚಾಗುತ್ತವೆ" ಯಾಕೆಂದರೆ ಅವಿದೇಯತ್ವದ ದೆಸೆಯಿಂದ ಅವರು ನಾಶವಾಗುವದಿಲ್ಲ (ಅದನ್ನು ಕ್ಷಣದಲ್ಲಿ ನೋಡುತ್ತೇವೆ). ಅವರಿಗೆ ಇರುವಂಥ ಹವ್ಯಾಸಗಳು ಉತ್ತಮವಾದವುಗಳಾಗಿರುವದರಿಂದ ಅವರು ಬದುಕಿರುವ ದಿನಗಳು ಹೆಚ್ಚಾಗುವವು. ಅವರು ದೇವರಿಗೆ ವಿದೇಯರಾಗುವದರಿಂದಲೂ, ಮತ್ತು ಅವರಲ್ಲಿ ದೇವರ ಆಶೀರ್ವಾದ ಇರುವದರಿಂದಲೂ ಅವರ ದಿವಸಗಳು ಹೆಚ್ಚಾಗುವವು.

ಧರ್ಮೋಪದೇಶಕಾಂಡ 5:16ರಲ್ಲಿ ತಂದೆ ತಾಯಿಗಳನ್ನು ಸನ್ಮಾನಿಸುವ ವಿಷಯದ ಸಲಹೆಗಳನ್ನು ನೀಡಲಾಗಿದೆ:

> ನಿನ್ನ ದೇವರಾದ ಯೆಹೋವನು ಆಜ್ಞಾಪಿಸಿದಂತೆ ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ, ಮತ್ತು ನಿನಗೆ ಮೇಲಾ ಗುವದು.

ಆ ಸಂದರ್ಭಕ್ಕೆ, ದೇವರು ನೇರವಾಗಿ ನೀಡಿದ ಅಪ್ಪಣೆ ಇದಾಗಿತ್ತು. ಅದರ ಜೊತೆಯಲ್ಲಿ ಆಶೀರ್ವಾದವೂ ಸಹ ನೆಲಸಿತ್ತು. ಮತ್ತು "ನಿನಗೆ ಮೇಲಾಗುವದು" ಹಾಗೂ ನಿನ್ನ ಜೀವನ ಸುಖಮಯವಾಗಿರುತ್ತದೆ. ಯಾವ ಮಗುವು ಕುಟುಂಬದಲ್ಲಿ ಸನ್ಮಾನಿಸುವದನ್ನು ಕಲಿಯುತ್ತದೋ: ಆ ಮಗುವು ಉತ್ತಮ ವಿದ್ಯಾರ್ಥಿಯಾಗಿಯೂ, ಉತ್ತಮ ಜೀವನ ಸಂಗಾತಿಯಾಗಿಯೂ, ಉತ್ತಮ ತಂದೆ, ತಾಯಿಗಳಾಗಿಯೂ, ಮತ್ತು ಉತ್ತಮವಾದ ಕೆಲಸಗಾರನು ಅಥವ ಕೆಲಸ ನೀಡುವವನು ಆಗುವದಕ್ಕೆ ಸಾಧ್ಯವಿದೆ.

ಧರ್ಮೋಪದೇಶ ಕಾಂಡ 27ರಲ್ಲಿ, ಒಡಂಬಡಿಕೆಯನ್ನು ಪುನರಾವರ್ತಿಸುವ ಕುರಿತು, ಅಪ್ಪಣೆಯನ್ನು, ವಾಗ್ದಾನ ದೇಶಕ್ಕೆ ಪ್ರವೇಶ ಮಾಡುತ್ತಿದ್ದ ಇಸ್ರಾಯೇಲ್ಯರಿಗೆ ನೀಡುವಾಗ, ಈ ಅಪ್ಪಣೆಯನ್ನು ಸಹ ಸೇರಿಸಲಾಗಿತ್ತು - ಆದರೆ ಅದು ನಕಾರಾತ್ಮಕವಾಗಿತ್ತು: "ತಂದೆ ತಾಯಿಗಳನ್ನು ಅವಮಾನ ಪಡಿಸಿದವನು ಶಾಪಗ್ರಸ್ತನು"[8] (ವಚನ 16ಎ).

ಹೊಸ ಒಡಂಬಡಿಕೆಯಲ್ಲಿ, ಯೌವನಸ್ಥನಾದ ಐಶ್ವರ್ಯವಂತನು ಯೇಸುವಿನ ಬಳಿಗೆ ಬಂದು, ತಾನು ನಿತ್ಯ ಜೀವವನ್ನು ಪಡೆಯಲು ಏನು ಮಾಡಬೇಕು ಎಂದು ಕೇಳಲಾಗಿ,

“ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು” ಎಂಬ ಆಜ್ಞೆಯನ್ನು ಒಳಗೊಂಡ ಇತರೆ ಅಪ್ಪಣೆಗಳನ್ನು ಸಹ ಯೇಸು ಪುನರಾವರ್ತಿಸಿದನು (ಲೂಕ 18:20). ಆಗ ಯೌವನಸ್ಥನು, “ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ ಎಂದು ಹೇಳಿದನು” (ವಚನ 21).

ಯೇಸುವಿನ ಹೊಸ ಒಡಂಬಡಿಕೆಯಂತೆ ತಂದೆ ತಾಯಿಗಳನ್ನು ಸನ್ಮಾನಿಸುವ ಮೂಲ ವಿಷಯವನ್ನು ಪದೇ ಪದೇ ಪುನರಾವರ್ತನೆ ಮಾಡಲಾಗಿದೆ: “ನಿನ್ನ ತಂದೆ, ತಾಯಿಯನ್ನು ಸನ್ಮಾನಿಸಬೇಕು (ಎಂಬ ಆಜ್ಞೆಯು ವಾಗ್ದಾನದಿಂದ ಕೂಡಿದ ಮೊದಲನೆಯ ಆಜ್ಞೆಯಾಗಿದೆ), ಆಗ ನಿನಗೆ ಮೇಲಾಗುವದು, ನೀನು ಭೂಮಿಯ ಮೇಲೆ ಬಹುಕಾಲ ಬಾಳುವಿ” (ಎಫೆಸ 6:2, 3).

ತಂದೆ ತಾಯಿಗಳಿಗೆ ಯಾವ ರೀತಿಯಿಂದ ಸನ್ಮಾನವನ್ನು ತೋರಿಸೋಣ?

(1) ನಾವು ಮಾತಿನಲ್ಲಿ ಅವರನ್ನು ಸನ್ಮಾನಿಸಬಹುದು (ಗೌರವವಿಲ್ಲದೆಯೂ) ಯೆಶಾಯ 45:10ರಲ್ಲಿ ಈ ಕಠಿಣ ವಚನವನ್ನು ನೋಡುತ್ತೇವೆ: “ನೀನು ಹುಟ್ಟಿಸುವದೇನು ಎಂದು ತಂದೆಯನ್ನು ಕೇಳುವವನ ಪಾಡು ಪಾಡೇ?” ನೀನು ಹೆರುವದೇನು ಎಂದು ಹೆಂಗಸನ್ನು ಕೇಳುವವನ ಗತಿ ಗತಿಯೇ! KJVಯಲ್ಲಿ “ಯಾಕೆ ನೀನು ನನಗೆ ಜನ್ಮ ನೀಡಿದೆ ಎಂದು ತಂದೆಯನ್ನು ಕೇಳುವವನು ಶಪಿಸಲ್ಪಡಲಿ?” ಎಂದು ನೋಡುತ್ತೇವೆ (ಒತ್ತಿ ಹೇಳಿದ್ದು ನನ್ನದು.) ಲಿವಿಂಗ್, ಬೈಬಲ್ ಈ ರೀತಿ ಉಲ್ಲೇಖಿಸುತ್ತದೆ: “ಆಗ ತಾನೇ ಜನಿಸಿದ ಮಗುವು ತನ್ನ ತಂದೆ ತಾಯಿಗಳಿಗೆ, ನೀವು ಏಕೆ ನನಗೆ ಜನ್ಮ ನೀಡಿರುವಿರಿ? ಸರಿಯಾದದನ್ನು ಯಾಕೆ ಮಾಡಲಿಲ್ಲ?” ಎಂದು ಕೇಳುವ ಮಗು ಶಪಿಸಲ್ಪಡಲಿ ಎಂದು ಹೇಳುತ್ತದೆ. ಇಲ್ಲಿ ಸೃಷ್ಟಿಕರ್ತನ ಕುರಿತ ಮಾನವನ ಭಾವನೆಯನ್ನು ತೋರ್ಪಡಿಸುತ್ತದೆ, ಎಂದು ಬರಹಗಾರನು ತಿಳಿಸುತ್ತಿದ್ದಾನೆ. ಪ್ರತಿಯೊಂದು ಕಾರ್ಯಕ್ಕು ತಂದೆ ತಾಯಿಯನ್ನೇ, ನಿಂದಿಸುವ ಯೌವನಸ್ಥನ ಕುರಿತಾಗಿರುತ್ತದೆ.

ಹಳೆ ಒಡಂಬಡಿಕೆಯಲ್ಲಿ, ತಂದೆ ತಾಯಿಯನ್ನು ನಿಂದಿಸುವವನನ್ನು ಕಲ್ಲೆಸೆದು ಕೊಲ್ಲಬೇಕಿತ್ತು (ವಿಮೋಚನಕಾಂಡ 21:17; ಯಾಜಕಕಾಂಡ 20:9; ಜ್ಞಾನೋಕ್ತಿ 20:20; ಜ್ಞಾನೋಕ್ತಿ 30:11ನ್ನು ನೋಡಿರಿ). ಒಂದು ವೇಳೆ ಆ ಆಜ್ಞೆಯನ್ನು ಪಾಲಿಸಿದ್ದೇ ಆಗಿದ್ದರೆ ಈ ದಿನ ಮನಸಂಕಲ್ಪವು ಕಡಿಮೆಯಾಗಿರುತ್ತಿತ್ತು.

(2) ನಮ್ಮ ತಂದೆ ತಾಯಿಗಳ ಬಗ್ಗೆ ಮಾತನಾಡುವ ವಿಷಯದಲ್ಲಿಯೂ, ತಂದೆ ತಾಯಿಗಳಿಗೆ ಸನ್ಮಾನವನ್ನು ತೋರಿಸುತ್ತೇವೆ (ತೋರಿಸುವುದು ಇಲ್ಲ) ಹಾಮನು ತನ್ನ ತಂದೆಯ ಹೀನ ಸ್ಥಿತಿಯನ್ನು ನಿಂದಿಸಿದಾಗ,[9] ಶಪಿಸಲ್ಪಟ್ಟನು (ಆದಿಕಾಂಡ 9:20-25).

(3) ನಮ್ಮ ಕ್ರಿಯೆಗಳಿಂದಲೂ ಸನ್ಮಾನವನ್ನು ತೋರಿಸುತ್ತೇವೆ (ತೋರಿಸುವದಿಲ್ಲ) ಅಗೌರವವನ್ನು ಸೂಚಿಸುವದಕ್ಕೆ ಪದಗಳ ಅವಶ್ಯವಿರುವದಿಲ್ಲ. ಜ್ಞಾನೋಕ್ತಿ 30:17 “ತಂದೆಯನ್ನು ಹಾಸ್ಯ ಮಾಡಿ ತಾಯಿಯ ಅಪ್ಪಣೆಯನ್ನು ದಿಕ್ಕರಿಸುವವನ ಕಣ್ಣನ್ನು ಹಳ್ಳಕೊಳ್ಳದ ಕಾಗೆಗಳು ಕುಕ್ಕುವವು” ರಣಹದ್ದುಗಳು ತಿಂದುಬಿಡುವವು ಎಂದು ಹೇಳುತ್ತದೆ. ಇದನ್ನು ನಾನು ಓದಿದಾಗ, ಯೌವನ ಪ್ರಾಯಕ್ಕೆ ಕಾಲಿಡುತ್ತಿರುವ ಹುಡುಗನು ಖಂಡಿಸಲ್ಪಟ್ಟ ನಂತರ ಆಕ್ಷೇಪಿಸಬಹುದು, “ನಾನು ಏನು ಹೇಳಿದೆ?” - ಪ್ರೋಷಕರ ಉತ್ತರ, “ನೀನು ಏನು ಹೇಳಿದೆ ಎಂಬುದಾಗಿ ಅಲ್ಲ, ನಿನ್ನ ಕಣ್ಣನ್ನು ತಿರುವಿದ ರೀತಿ” ಸರಿಯಾಗಿರುವದಿಲ್ಲ.

ಹಳೆಯ ಒಡಂಬಡಿಕೆಯಲ್ಲಿ, ತಂದೆಯನ್ನು ಹೊಡೆದು ತಾಯಿಯನ್ನು ಓಡಿಸುವ ಮಗನು, ನಾಚಿಕೆಯನ್ನು ಅವಮಾನವನ್ನು ಉಂಟುಮಾಡುವನು (ಜ್ಞಾನೋಕ್ತಿ 19:26). ತಂದೆಯನ್ನಾಗಲಿ ತಾಯಿಯನ್ನಾಗಲಿ ಹೊಡೆದವನಿಗೆ ಮರಣಶಿಕ್ಷೆಯಾಗಬೇಕು (ವಿಮೋಚನಕಾಂಡ 21:15). ಮಕ್ಕಳು ತಂದೆ ತಾಯಿಗಳನ್ನು ಸನ್ಮಾನಿಸುವ ಕುರಿತು ಅಥವಾ ಅಗೌರವಿಸುವ ಕುರಿತು - ದೊಡ್ಡ ಪಟ್ಟಿಯನ್ನೇ ತೋರಿಸಬಹುದು.

ಪ್ರವಾದಿಯಾದ ಮೀಕನು ತನ್ನ ದಿವಸಗಳಲ್ಲಿದ್ದ ಕೆಟ್ಟತನದ ಬಗ್ಗೆ ತಿಳಿಸಿರುವುದೇನೆಂದರೆ, "ಮಗನು ತಂದೆಯನ್ನು ತುಚ್ಛೀಕರಿಸುತ್ತಾನೆ, ಮಗಳು ತಾಯಿಗೆ ಎದುರೇಳುತ್ತಾಳೆ" (ಮೀಕ 7:6) ತಂದೆ ತಾಯಿಗಳು ನಮ್ಮ ಸನ್ಮಾನಕ್ಕೆ ಯೋಗ್ಯರು.

## ನಮ್ಮ ವಿಧೇಯತೆ

ವಿದೇಯತೆಯ ಮೂಲಕ ತಂದೆ ತಾಯಿಗಳನ್ನು ಸನ್ಮಾನಿಸುವದು ಒಂದು ಸವಾಲಾಗಿರುತ್ತದೆ. ಮಕ್ಕಳು ತಂದೆತಾಯಿಳಿಗೆ ಅವಿಧೇಯರಾಗುವುದು, ಅದು ವರ್ಣಿಸಲಾರದ ಸೋಲಾಗಿರುತ್ತದೆ. ಪೌಲನು ತನ್ನ ಕಾಲದಲ್ಲಿದ್ದ, ಕೆಟ್ಟ ದಿವಸಗಳ ಕುರಿತು ಅದರ ಲಕ್ಷಣಗಳನ್ನು ತಿಳಿಸಿದ್ದಾನೆ: "ದುರಹಂಕಾರದ, ಸೊಕ್ಕಿನ, ಹಾಗೂ ... ತಂದೆ ತಾಯಿಗಳಿಗೆ ಅವಿಧೇಯರು ಆಗಿರುವರು ಎಂದು ತಿಳಿಸಿದ್ದಾನೆ."

ಕೆಲವು ವರ್ಷಗಳ ಹಿಂದೆ, ಎಲೆನಾರ್ ರೂಸ್‌ವೆಲ್ಟ್‌ರವರು[10] ತಮ್ಮ ದೈನಂದಿನ ಪತ್ರಿಕೆಯಲ್ಲಿ, "ನಮ್ಮ ಯೌವನ ಮಕ್ಕಳ ಕರಿತಾಗಿಯೂ, ಮತ್ತು ಪ್ರಪಂಚದಲ್ಲಿರುವ ಕೆಟ್ಟತನದ ಕುರಿತಾಗಿಯೂ, ಈಗ ಸಂಭವಿಸುತ್ತಿರುವ ಎಲ್ಲಾ ಘಟನಾವಳಿಗಳು ಈ ಮೊದಲೇ ಉದ್ಭವಿ ಸಿದ್ದವು ಎಂಬುದಾಗಿ ತಿಳಿಸಿರುವದು, ನಮಗೆ ಉತ್ತೇಜನವಾಗ ಬಹುದು."[11] ನಂತರ ಆಕೆಯು ತಿಳಿಸಿ: "ನಮ್ಮ ಪ್ರಪಂಚವು ಲಂಚ, ಭ್ರಷ್ಟಚಾರ, ಮಕ್ಕಳು ಪೋಷಕರಿಗೆ ಅವಿಧೇಯರಾಗುತ್ತಿರುವ ಸಂಗತಿಗಳಿಂದ, ಅವನತಿಯ ಕಡೆಗೆ ಸಾಗುತ್ತಾ, ಪ್ರಪಂಚದ ಅಂತ್ಯದೆಡೆಗೆ ಬರುತ್ತದೆ."[12] ಈ ಪದಗಳನ್ನು ಕ್ರಿ.ಶ. 2800ರಲ್ಲಿ ಅಸ್ಸಿರೀಯರ ಕಲ್ಲಿನ ಹಲಗೆಗಳ ಮೇಲೆ ಬರೆದಿದ್ದವು ಎಂದು ಅವರು ತಿಳಿಸಿದ್ದಾರೆ.

ಶ್ರಿಮತಿ ರೂಸ್‌ವೆಲ್ಟ್‌ರವರು ಮತ್ತೊಂದು ಹೇಳಿಕೆಯನ್ನು ಸಹ ನೀಡಿದ್ದಾರೆ. "ಶ್ರಿಮಂತಿಕೆಯನ್ನು ಮಕ್ಕಳು ಬಯಸುತ್ತಾರೆ; ಅಗೌರವದಿಂದ ವರ್ತಿಸುತ್ತಾರೆ, ಅಧಿಕಾರವನ್ನು ಎದುರಿಸುತ್ತಾರೆ. ಮನೆಯಲ್ಲಿ ಸೇವಕರಾಗಿರುವ ಬದಲು ಅಧಿಕಾರ ನಡೆಸಲು ಬಯಸುತ್ತಾರೆ, ತಂದೆ ತಾಯಿಗಳಿಗೆ ತದ್ವಿರುದ್ಧವಾಗಿರುತ್ತಾರೆ. ಇತರರ ಎದುರಿಗೆ ಕೊಚ್ಚಿಕೊಳ್ಳುವವರು ಊಟದ ಮೇಜಿನ ಬಳಿ ಗದ್ದಲ ಮಾಡುವವರು, ಅವರ ಶಿಕ್ಷಕರನ್ನು ಎದುರಿಸುವವರು ಆಗಿದ್ದಾರೆ."[13] ಈ ವಿಷಯವನ್ನು ಕ್ರಿಸ್ತನಿಗಿಂತಲೂ, ಮೂರು ಶತಮಾನಗಳ ಹಿಂದೆಯೇ ಪ್ಲೆಟೋ ಎಂಬವರು ಬರೆದಿದ್ದಾರೆ, ಮತ್ತು ಇದೇ ಹೇಳಿಕೆಯನ್ನು ಹಳೆಯ ಗ್ರೀಸ್‌ನಲ್ಲಿದ್ದ ಸೋಕ್ರೇಟ್ಸ್‌ರವರು ಸಹ ತಿಳಿಸಿದ್ದಾರೆ.

ಎಫೆಸ 6:1ರಲ್ಲಿರುವ ವಾಕ್ಯವು ಸರಳವಾಗಿಯೂ, ನೇರವಾಗಿಯು ಮಾತನಾಡುತ್ತದೆ: "ಮಕ್ಕಳೇ, ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆ ತಾಯಿಗಳ ಮಾತನ್ನು ಕೇಳಬೇಕು, ಇದು ಧರ್ಮ." ಅವರು ಯಾವಾಗಲೂ ಸರಿಯಾಗಿರುವದರಿಂದ, ನಾವು ಅವರಿಗೆ ವಿಧೇಯರಾಗಬೇಕೋ? ಇಲ್ಲ, ಯಾಕೆಂದರೆ ಇದು "ಧರ್ಮ" ವಿದೇಯರಾಗಿ ಜೀವಿಸುವದು ಸರಿಯಾದ ಜೀವಿತದ ಮಾರ್ಗವಾಗಿದೆ. ಅಲ್ಲಿರುವ "ಕರ್ತನಲ್ಲಿ" ಎಂಬ ವಾಕ್ಯವು ಇದು ದೇವರೊಂದಿಗಿನ ಸಂಬಂಧದ ಕುರಿತಾಗಿರುತ್ತದೆ, ಅದು ನಿನ್ನ ಕ್ರೈಸ್ತತ್ವವನ್ನೂ ತಿಳಿಸುತ್ತದೆ. ನೀವು ಮತ್ತು ನಿಮ್ಮ ಮಕ್ಕಳು ಪರಸ್ಪರ ಕ್ರೈಸ್ತರಾಗಿದ್ದರೆ, ಅದು ನಿಮಗೆ ಎರಡರಷ್ಟು ಆಶೀರ್ವಾದದ ಸಂಬಂಧವನ್ನು ನೀಡುತ್ತದೆ. ನಿಮ್ಮ ಪೋಷ ಕರು ಕ್ರೈಸ್ತರಲ್ಲದಿದ್ದರೂ ನೀವು ಅವರಿಗೆ ವಿಧೇಯರಾಗಬೇಕು. ಇದು "ಧರ್ಮ" ಮತ್ತು "ದೇವರ ಚಿತ್ತ."

ಕೊಲಸ್ಸೆ 3:20ರಲ್ಲಿ ಪೌಲನು ಒಂದು ಅಥವ ಎರಡು ಆಲೋಚನೆಯನ್ನು ಇದರೊಂದಿಗೆ ಸೇರಿಸುತ್ತಾನೆ: "ಮಕ್ಕಳೇ, ಎಲ್ಲಾ ವಿಷಯಗಳಲ್ಲಿ ನಿಮ್ಮ ತಂದೆ ತಾಯಿಗಳ ಮಾತನ್ನು ಕೇಳಿರಿ. ಇದು ಕರ್ತನ ದೃಷ್ಟಿಯಲ್ಲಿ ಮೆಚ್ಚಿಗೆಯಾಗಿದೆ." ಎಲ್ಲಾ ವಿಷಯಗ ಳಲ್ಲಿ ಅಂದರೆ ಇದರ ಅರ್ಥ "ದೇವರ ಚಿತ್ತಕ್ಕೆ ವಿರುದ್ಧವಾಗಿ ಇರುವ ಸಕಲಕಾರ್ಯಗಳಲ್ಲೂ ಎಂಬುದಾಗಿ" (ಅಪೋಸ್ತಲರ ಕೃತ್ಯಗಳು 5:29ನ್ನು ನೋಡಿರಿ). ಇದನ್ನು ಮಗುವು, ದೇವರನ್ನು ಮೆಚ್ಚಿಸುತ್ತದೆ ಎಂದು

ಪೌಲನು ತಿಳಿಸಿದ್ದಾನೆ. ಯೇಸು ದೇವರ ಮಗನಾಗಿದ್ದರೂ ಸಹ, ಆತನ ಬಾಲ ಪ್ರಾಯದಲ್ಲಿ, ಯೋಸೇಪನಿಗೂ, ಮರಿಯಳಿಗೂ "ಅಧೀನನಾಗಿದ್ದನು" (ಲೂಕ 2:51).

ಮಕ್ಕಳನ್ನು ಸಲಹುವದು ಬಹಳ ಪ್ರಾಮುಖ್ಯ ಎಂದು ಅನೇಕರು ಯೋಚಿಸುತ್ತಾರೆ. ಮಕ್ಕಳು ಮಹಾ ಮಾರ್ಗದಲ್ಲಿ ಆಡುವದನ್ನು ಅಥವ ಬೆಂಕಿಯಲ್ಲಿ ಆಡುವದನ್ನು ತಪ್ಪಿಸದೆ ಹೋದರೆ, ಆ ಮಕ್ಕಳು ತಮ್ಮ ಪ್ರೌಢಾವಸ್ಥೆಯನ್ನು ತಲುಪುವದಿಲ್ಲ ಎಂದು ಕೆಲವರು ಯೋಚಿಸುತ್ತಾರೆ. ಬಾಲ ಪ್ರಾಯದಲ್ಲಿರುವವರು ತಮಗೆ ಸಲಹೆಯ ಅವಶ್ಯವಿಲ್ಲ ಎಂದು ಯೋಚಿಸಿದರೂ, ಅವರಿಗೆ ಸಲಹೆಯ ಅವಶ್ಯವಿದೆ.

ಪೋಷಕರಿಗೆ ವಿಧೇಯರಾಗುವದು ಅಂದರೆ ಅದರ ಅರ್ಥವೇನು? ತಂದೆ ತಾಯಿಗಳು ಅನೇಕ ಸಾರಿ ಹೇಳಿದ ನಂತರ, ಅದನ್ನು ಮಕ್ಕಳು ಮಾಡಬೇಕು ಎಂಬುದಾಗಿಯೋ? ಇಲ್ಲ ತಂದೆ ತಾಯಿಯ ಕೋರಿಕೆಯನ್ನು ವೇಗವಾಗಿಯೂ, ಸಂತೋಷವಾಗಿಯೂ, ಈಡೇರಿಸಬೇಕು. ಇದನ್ನೆ ದೇವರು ಇಷ್ಟಪಡುತ್ತಾನೆ. ಇಂಥ ಸ್ವಭಾವವು ಪೋಷಕರನ್ನು ಸಂತೋಷಗೊಳಿಸುತ್ತದೆ.

ಪೋಷಕರಿಗೆ ವಿಧೇಯವಾಗುವಂತಹ ಮಕ್ಕಳ ಬಗ್ಗೆ ದೇವರು ಚಿಂತಿಸು ವವನಾಗಿದ್ದಾನೆ - ಇದರಿಂದ, ಕುಟುಂಬದಲ್ಲಿ ಉಂಟಾಗಿರುವ ಪರಿಣಾಮದಿಂದ ಮಾತ್ರವಲ್ಲ, ಸಮಾಜಕ್ಕೆ ಉಂಟಾಗಿರುವ ಪರಿಣಾಮದಿಂದಲೂ ಸಹ ಈ ಕುರಿತಾಗಿ. ಎಡ್ವರ್ಡ್ ಎಲ್. ಕಾಸ್ಟೆ ಬರೆ ದಿರುವದು,

> ಅನೇಕ ವರ್ಷಗಳಿಂದ, ತಂದೆ ತಾಯಿಗಳಿಗೆ ವಿಧೇಯರಾಗಿದ್ದವರು ಅವರನ್ನೇ ಅವಲಂಭಿಸಿರುವ ಮಕ್ಕಳು, ದೇವರ ಮೇಲೆಯೂ ಇತರರ ಮೇಲೆಯೂ ಇಡಲೇ ಬೇಕಾಗಿರುವ ವಿಶ್ವಾಸದ ಕುರಿತು ಕಲಿಯುತ್ತಾರೆ. ಒಂದು ವೇಳೆ ತಂದೆ ತಾಯಿಗಳನ್ನು ವಿಶ್ವಾಸಿಸದೆ ಇರುವ ಮಗುವು ಬೇರೆಯವರ ಮೇಲೆ ವಿಶ್ವಾಸ ಇಡುವದಿಲ್ಲ ಈ ವಿಷಯ ಅಪಾಯಕಾರಿ ತಂದೆ ತಾಯಿಗಳಿಗೆ ವಿಧೇಯರಾಗುವುದೇ, ಮಾನವೀಯ ಸಮಾಜದಲ್ಲಿ ಅತಿ ಶ್ರೇಷ್ಟವಾದದ್ದು.

ಪೋಷಕರು, ಮಕ್ಕಳ ವಿಷಯದಲ್ಲಿ ಆಸಕ್ತಿ ತೋರದೆ ಇರುವದು ಜವಾಬ್ದಾರಿ ಹೊರದೆ ಇರುವದು, ಮಕ್ಕಳು ಸಹ ಆಸಕ್ತಿ ತೋರದೆ, ತಂದೆ ತಾಯಿಯರ ಜವಾಬ್ದಾರಿಯನ್ನು ಹೊರದೆ ಇರುವದು ಸರಿಯಾದದ್ದೆ, ಎಂಬ ಅಂಶವನ್ನು ಕಾಸ್ಟ್‌ರವರು ತೋರಿಸಿದ್ದಾರೆ. "ಅವರು ಒಂದು ಪ್ರಶ್ನೆಯನ್ನು ಕೇಳಿ, ಯಾಕೆ ಒಬ್ಬರು ಇನ್ನೊಬ್ಬರಿಗೆ ವಿದೇಯರಾಗಬೇಕು?" ಇದಕ್ಕೆ ಉತ್ತರವನ್ನು ಸಹ ನೀಡಿದ್ದಾರೆ:

> ಮಾನವೀಯ ಸಹಕಾರದ ಪ್ರತಿಫಲವೇ ಸಮಾಜವಾಗಿರುತ್ತದೆ, ಜವಾಬ್ದಾರಿಯುತ ವಾದ ಅಧಿಕಾರಕ್ಕೆ ಒಳಗಾಗುವಂತೆ ಪರಸ್ಪರ ಗೌರವವು ಇಲ್ಲದೆ ಹೋದರೆ, ಸಮಾಜವು ಕಾರ್ಯಮಾಡಲು ಹೇಗೆ ಸಾಧ್ಯವಾಗುತ್ತದೆ? ಅವಿಧೇ ಯರಾದ ಮಕ್ಕಳು ಸಮಾಜದಲ್ಲಿರುವುದಾದರೆ, ಇತಿಹಾಸಕಾರರು ತಮ್ಮಲೇಖನಿಯಿಂದ, ಇಂತಹ ಸಮಾಜದ ಬೀಳುವಿಕೆಯ ಕುರಿತಾದ ದಾಖಲೆಯನ್ನು ನಮೂದಿಸುತ್ತಾರೆ.[14]

ಅವಿಧೇಯ ಮಕ್ಕಳ ಕುರಿತ ಪ್ರತಿಕ್ರಿಯೆಯನ್ನು ದೇವರು ಇಸ್ರಾಯೇಲ್ ಮಕ್ಕಳಿಗೆ ಅನುಗ್ರಹಿಸಿದ ಧರ್ಮಶಾಸ್ತ್ರದಲ್ಲಿ ಪ್ರತಿಬಿಂಬಿಸಲಾಗಿದೆ:

> ಒಬ್ಬ ಮಗನು ತಂದೆತಾಯಿಗಳ ಆಜ್ಞೆಗೆ ಒಳಗಾಗದೆ ಶಿಕ್ಷಿಸಲ್ಪಟ್ಟರೂ ಮೊಂಡನೂ ಅವಿಧೇಯನೂ ಆಗಿ ಅವರ ಮಾತನ್ನು ಕೇಳದೆಹೋದರೆ ತಂದೆತಾಯಿಗಳು ಅವನನ್ನು ಹಿಡಿದು ಊರುಬಾಗಲಿಗೆ ಹಿರಿಯರ ಮುಂದೆ ತಂದು ಅವರಿಗೆ - ಈ ನಮ್ಮ ಮಗನು

> ನಮ್ಮ ಮಾತನ್ನು ಕೇಳುವದೇ ಇಲ್ಲ, ಆಜ್ಞೆಗೆ ಒಳಗಾಗುವದಿಲ್ಲ; ಇವನು ಮೊಂಡ ಕುಡಿಕ ತುಂಟ ಎಂದು ಸಾಕ್ಷಿ ಹೇಳಬೇಕು. ಆಗ ಊರಿನವರೆಲ್ಲರೂ ಅವನನ್ನು ಕಲ್ಲೆಸೆದು ಕೊಲ್ಲಬೇಕು. ಹೀಗೆ ನೀವು ಆ ದುಷ್ಟತ್ವವನ್ನು ನಿಮ್ಮ ಮಧ್ಯದೊಳಗಿನಿಂದ ತೆಗೆದುಹಾಕಿಬಿಡಬೇಕು. ಇಸ್ರಾಯೇಲ್ಯರೆಲ್ಲರೂ ಕೇಳಿ ಭಯಪಡುವರು (ಧರ್ಮೋಪ ದೇಶಕಾಂಡ 21:18-21).

ಅವಿಧೇಯ ಮಕ್ಕಳನ್ನು ಕೊಲ್ಲಬೇಕು ಎಂದು ಹೊಸ ಒಡಂಬಡಿಕೆಯು (ಈಗ ನಾವು ಒಳಪಟ್ಟಿರುವ ಒಡಂಬಡಿಕೆ) ತಿಳಿಸುವದಿಲ್ಲ. ಆದರೆ ಮಕ್ಕಳು ತಂದೆ ತಾಯಿಗಳಿಗೆ ವಿಧೇಯರಾಗಬೇಕು ಎಂಬ ಧರ್ಮಶಾಸ್ತ್ರದ ನಿಯಮಗಳು ಮಾತ್ರ ಈಗಲೂ ಪ್ರಚಲಿತವಾಗುತ್ತವೆ.

ತಂದೆ ತಾಯಿಗಳು ಯಾವಾಗಲು ಸರಿಯಾಗಿರುವದಿಲ್ಲ, ಆದರೆ ಮಕ್ಕಳ ಬಗ್ಗೆ ಕಾಳಜಿವಹಿಸುವುದಾದರೆ, ಅವರು ಬಹಳಷ್ಟು ಸಾರಿ ತಪ್ಪಾಗಿ ನಡೆದುಕೊಳ್ಳುವದಕ್ಕಿಂತ ಬಹುಶಃ ಸರಿಯಾಗಿ ನಡಕೊಳ್ಳುತ್ತಾರೆ. ಬಾಲ್ಯ ಪ್ರಾಯದವರೆ - ನಿಮ್ಮನ್ನು ಶಿಕ್ಷಿಸಿ - ಪೋಷಿಸುವ ತಂದೆತಾಯಿಗಳು ನಿಮಗಿದ್ದರೆ, ಅವರಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸಿರಿ!

ನಾವು ತಂದೆ ತಾಯಿಗಳಿಗೆ ವಿಧೇಯತೆಯ ಹಂಗಿನವರಾಗಿದ್ದೆವೆ.

## ಅರ್ಥಮಾಡಿಕೊಳ್ಳುವಿಕೆ

ನಾನು ತಿಳಿಸಿರುವ "ಸಾಲ" ಎಂಬ ಪದವು ಮೆಚ್ಚುಗೆ, ಸನ್ಮಾನ, ಮತ್ತು ವಿಧೇಯತ್ವ ಎಂಬ ಸಂಗತಿಗಳನ್ನು ಒಳಗೊಂಡಿದೆ. ಅವುಗಳನ್ನು ಪ್ರತ್ಯೇಕವಾಗಿ ಚರ್ಚಿಸುವುದು ಪ್ರಾಮುಖ್ಯವಾಗಿದೆ. ಪಟ್ಟಿಯಲ್ಲಿರುವ, ಮುಂದಿನ "ಅರ್ಥಮಾಡಿಕೊ ಳ್ಳುವಿಕೆ." ನಾವು ನಮ್ಮ ಪೋಷಕರನ್ನು ಅನುಕಂಪದ ತಿಳುವಳಿಕೆಯಿಂದ ಅವರನ್ನು ಅರ್ಥಮಾಡಿಕೊಳ್ಳಬೇಕು.

ನಮ್ಮ ಹಿಂದಿನ ಪಾಠದಲ್ಲಿ, "ಗಂಡದಿರು ತಮ್ಮ ಹೆಂಡತಿಯರೊಂದಿಗೆ ವಿವೇಕದಿಂದ ಒಗತನ ಮಾಡಬೇಕು" ಎಂದು ಉತ್ತೇಜಿಸಿದ್ದೇವೆ (1 ಪೇತ್ರ 3:7). ಕುಟುಂಬದ ಸಂಬಂಧಗಳಿಗೆ ಇದು ಕೆಟ್ಟ ಸಲಹೆ ಅಲ್ಲ. ನಾವು ಪರಸ್ಪರ ಅರ್ಥಮಾಡಿಕೊಳ್ಳಬೇಕು.

"ನನ್ನ ತಂದೆ ತಾಯಿಗಳು ನನ್ನನ್ನು ಅರ್ಥಮಾಡಿಕೊಳ್ಳುವದಿಲ್ಲ ಎಂದು." ಅನೇಕ ಬಾಲಕರು ಅಳುವದನ್ನು ಕೇಳಿದ್ದೇನೆ, ಇದರಲ್ಲಿ ಪರಸ್ಪರ ತಿಳುವಳಿಕೆ ಅಗತ್ಯವಿದೆ ಎಂದು ಅವರು ತಿಳಿದಿರುವದಿಲ್ಲ. ನೀನು ಬಾಲಕನಾಗಿದ್ದರೆ, ಈ ಒಂದು ಕೊರತೆ ನಿನ್ನ ಕಡೆಯಿಂದಲೇ ಉದ್ಭವವಾಗಿದೆ ಎಂದು ತಿಳುಕೊಂಡಿಲ್ಲವೋ? ಯಾಕೆಂದರೆ ನಿನ್ನ ತಂದೆ ತಾಯಿಗಳು ಒಂದು ಕಾಲದಲ್ಲಿ ಯೌವನ ಪ್ರಾಯದವರಾಗಿದ್ದರು, ಅವರಿಗೆ ಬಾಲ್ಯಾವಸ್ಥೆಯ ಹಾಗೂ ಪ್ರೌಢಾವಸ್ಥೆಯ ಎರಡೂ ಅನುಭವಗಳುಂಟು ಆದರೆ ಇನ್ನೊಂದು ಕಡೆ ನಿನಗೆ ಬಾಲ್ಯಾವಸ್ಥೆಯ ಅನುಭವ ಮಾತ್ರ ಇರುತ್ತದೆ. ಅವರು ಯಾವಾಗಲೂ ನಿನ್ನ ಅಂಶವನ್ನೇ ಗಮನಿಸಬೇಕು ಎಂದು ಹೇಳುವ ನೀನು, ತಂದೆ ತಾಯಿಗಳ ದೃಷ್ಟಿಕೋನವನ್ನು ತಿಳುಕೊಳ್ಳಲು ಪ್ರಯತ್ನವನ್ನು ಮಾಡಿರುವೆಯಾ?

ಬಾಲ್ಯಾವಸ್ಥೆಯ ಬಹಳ ಕಷ್ಟಕರವಾದದ್ದು ಎಂದು ಕೆಲವರು ಹೇಳುತ್ತಾರೆ. ಬಾಲ್ಯಾವಸ್ಥೆಯಲ್ಲಿರುವವರನ್ನು ಪೋಷಿಸುವದು ಸಹ ಕಷ್ಟಕರವಾದದ್ದೇ. ಬಾಲ್ಯವಸ್ಥೆಯಲ್ಲಿರುವವರೇ, ನಿಮ್ಮ ತಂದೆ ತಾಯಿಗಳು ವೃದ್ಧಾಪಕ್ಕೆ ಹೋಗುವಾಗ ಅವರ ಜೀವನ ಸಂಕಷ್ಟದಲ್ಲಿರುತ್ತದೆ, ಎಂದು ತಿಳುಕೊಂಡಿದ್ದೀರಾ? ಅವರ ವ್ಯವಹಾರದಲ್ಲಿ ಉಂಟಾಗಿರುವ ಕಷ್ಟಗಳನ್ನು ನೀವು ಅರ್ಥಮಾಡಿಕೊಂಡಿದ್ದೀರಾ? ಈ ಆರ್ಥಿಕ ಪರಿಸ್ಥಿತಿಯಲ್ಲಿ ಎಲ್ಲಾ "ಕೊರತೆಗಳನ್ನು ಪರಿಹರಿಸುವದು" ಎಷ್ಟು ಕಷ್ಟಕರವಾಗಿದೆ ಎಂದು ಯೋಚಿಸಿದ್ದಿರಾ? ಈಗಾಗಲೇ ನಿನ್ನ ತಾಯಿ ತನ್ನ ಜೀವನದ ಕಠಿಣವರುಷಗಳಿಗೆ ಬದಲಾಗುತ್ತಾ, ಅಥವಾ ನಿನ್ನ ತಂದೆಯು "ಜೀವನದ ಮದ್ಯದಲ್ಲಿ ಉಂಟಾಗುವ ಸಂಕಷ್ಟಗಳಿಗೆ" ಸಿಲುಕಿದ್ದಾರೆ ಎಂದು ತಿಳಿದುಕೊಂಡಿರುವೆಯಾ?

## ನಮ್ಮ ಸಹಕಾರ

ನಾವು ನಮ್ಮ ಪೋಷಕರಿಗೆ ಸಾಧ್ಯವಾದಷ್ಟು ಸಹಕಾರವನ್ನು ನೀಡುವ ಹಂಗಿನಲ್ಲಿದ್ದೇವೆ. ತಂದೆ ತಾಯಿಗಳು ಭಯಪಡಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. 1 ತಿಮೊಥೆ 5:8ರಲ್ಲಿ "ಯಾವನಾದರು ಸ್ವಂತ ಜನರನ್ನು ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೇ ಹೋದರೆ ಅವನು ಕ್ರಿಸ್ತನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ" ಎಂದು ತಿಳಿಸುತ್ತದೆ. ಎಫೆಸ 6:4 "ಕರ್ತನಿಗೆ ಮೆಚ್ಚಿಗೆಯಾದ ಬಾಲ ಶಿಕ್ಷೆಯನ್ನು ಬಾಲೋಪದೇಶವನ್ನು ಮಾಡುತ್ತಾ ಅವರನ್ನು ಸಾಕಿ ಸಲಹಿರಿ" ಎಂದು ತಂದೆಗಳಿಗೆ ಅಪ್ಪಣೆ ನೀಡಲಾಗಿದೆ. ಕುಟುಂಬಗಳಿಗೆ ಆತ್ಮಿಕವಾಗಿಯೂ, ದೈಹೀಕವಾಗಿಯೂ ಇರುವ ಎಲ್ಲಾ ಕೊರತೆಗಳನ್ನು ನೀಗಿಸುವ ಜವಾಬ್ದಾರಿಯನ್ನು ದೇವರು ತಂದೆ ತಾಯಿಗಳಿಗೆ ಕೊಟ್ಟಿದ್ದಾನೆ. ಅವರು ತಮ್ಮ ಮನೆವಾರ್ತೆಯ ವಿಷಯದಲ್ಲಿ ದೇವರಿಗೆ ಲೆಕ್ಕ ಕೊಡಬೇಕಾಗಿದೆ (1 ಕೊರಿಂಥ 4:2). ನಮ್ಮ ಈ ಮಹತ್ತರವಾದ ಕಾರ್ಯಗಳನ್ನು ಸಾಧ್ಯವಾದಷ್ಟು ಸರಳೀಕರಿಸಿಕೊಳ್ಳಬೇಕು.

ನಮ್ಮ ಕೊರತೆಗಳನ್ನು ಅವರು ನೀಗಿಸುವ ವಿಷಯದಲ್ಲಿ ನಮಗೆ *ಬೇಕಾದದೆಲ್ಲವೂ* ದೊರೆಯದ ಸಮಯದಲ್ಲಿ ನಾವು ಅವರನ್ನು ದೂರಬಾರದು. ಆತ್ಮೀಕ ಪೋಷಣೆಯ ವಿಷಯದಲ್ಲಿ ಅವರು ನಮ್ಮನ್ನು ಬಾಲಶಿಕ್ಷೆಗೆ ಒಳಪಡಿಸುವಾಗ, "ನಾವು ಅವರಿಗೆ ಸಹಕಾರಿಗಳಾಗಿರಬೇಕು."[15] ನಾವು ಶಿಕ್ಷೆಗೆ ಒಳಪಡುವವರಾಗಿರೋಣ. ವಿವೇಕಿಯಾದ ಮನುಷ್ಯನು ಈ ರೀತಿ ಬರೆದಿದ್ದಾನೆ, "ಮಗನೇ ನಿನ್ನ ತಂದೆಯ ಉಪದೇಶವನ್ನು ಕೇಳು, ನಿನ್ನ ತಾಯಿಯ ಬೋಧನೆಯನ್ನು ತೊರೆಯಬೇಡ. ಅವು ನಿನ್ನ ತಲೆಗೆ ಅಂದದ ಪುಷ್ಪ ಕಿರೀಟ; ಕೊರಳಿಗೆ ಹಾರ" (ಜ್ಞಾನೋಕ್ತಿ 1:8, 9). ಹಾಗೂ ಅವನು ಹೇಳಿದ್ದು,

> ಕಂದಾ, ತಂದೆಯ ಆಜ್ಞೆಯನ್ನು ಕೈಕೊಳ್ಳು,
> ತಾಯಿಯ ಉಪದೇಶವನ್ನು ಬಿಡಬೇಡ.
> ಅವುಗಳನ್ನು ನಿನ್ನ ಹೃದಯಕ್ಕೆ ನಿರಂತರವಾಗಿ ಬಂಧಿಸು,
> ನಿನ್ನ ಕಂಠಕ್ಕೆ ಧರಿಸಿಕೋ.
> ನೀನು ನಡೆಯುವಾಗ ಆ ಉಪದೇಶವು ನಿನ್ನನ್ನು
> ನಡಿಸುವದು,
> ಮಲಗಿಕೊಂಡಾಗ ಕಾಯುವದು,
> ಎಚ್ಚರಗೊಂಡಾಗ ನಿನ್ನೊಂದಿಗೆ ಮಾತಾಡುವದು (ಜ್ಞಾನೋಕ್ತಿ 6:20-22).

ನಿಮ್ಮ ತಂದೆ ತಾಯಿಗಳ ಶಿಕ್ಷಾವಿಧಿಯನ್ನು ಒಡವೆಗಳಿಗೆ ಹೋಲಿಸಿದ ಚಿತ್ರಣವು, ನೀನು ಅವರ ಸಲಹೆಗಳನ್ನು ಸ್ವೀಕರಿಸುವದಾದರೆ, ನೀನು ಸುಂದರವಾದ ಜೀವನವನ್ನು ಪಡೆಯುವಿ ಎಂಬುದಾಗಿ ತಿಳಿಸುತ್ತದೆ.[16]

ಒಳಪಡುವಂತೆ ಅನೇಕ ವಾಕ್ಯಗಳು ಒತ್ತಿ ಹೇಳುತ್ತವೆ: "ಕಂದಾ, ನನ್ನ ಮಾತುಗಳನ್ನು ಆಲಿಸು. ನನ್ನ ನುಡಿಗಳಿಗೆ ಕಿವಿಗೊಡು" (ಜ್ಞಾನೋಕ್ತಿ 4:20); "ಸದುಪದೇಶವನ್ನು ಹಿಡಿ ಸಡಿಲಬಿಡಬೇಡ; ಅದನ್ನು ಕಾಪಾಡಿಕೋ, ಅದೇ ನಿನ್ನ ಜೀವವು" ( ಜ್ಞಾನೋಕ್ತಿ 4:13). ಬಾಲ್ಯಾವಸ್ಥೆಯಲ್ಲಿರುವವರೆ ನಿಮ್ಮ ತಂದೆ ತಾಯಿಗಳು ಸರಿಯಾದದನ್ನೇ, ನಿಮಗೆ ಬೋಧಿಸುತ್ತಿದ್ದರೆ.

ಅವರಿಗಾಗಿ ದೇವರಿಗೆ ಸ್ತೋತ್ರ ಮಾಡಿರಿ. ಜನವರಿ 27, 1967ರಲ್ಲಿ *ಅಪೋಲೋ 1* ಸಿಡಿದಾಗ, ಅದರಲ್ಲಿ ಮರಣ ಹೊಂದಿದ ಮೂವರು ಖಗೋಳಜ್ಞರಲ್ಲಿ ಒಬ್ಬರಾದ, ಎಡ್ವರ್ಡ್ ಹೆಚ್ ವೈಟ್‌ರವರು ಮರಣಕ್ಕಿಂತ ಮೊದಲು ತಿಳಿಸಿದ ತಂದೆ ತಾಯಿಗಳ ಕುರಿತಾದ ಚಿಂತನೆ:

> ನಾನು ಬಾಲ್ಯಾವಸ್ಥೆಯಲ್ಲಿರುವಾಗ, ಅನೇಕ ಬಾಲಕರಿಗೆ ನಂಬಿಕೆಯಲ್ಲಿ ಇದ್ದಂತಹ ಜೀವಕರವಾದ ಭರವಸೆ ನನಗಿರಲಿಲ್ಲ, ಆದರೆ ನನಗೆ ಅರ್ಥವಾಗುವಂಥ ರೀತಿಯಲ್ಲಿ ಹೇಳಲು ಭಾಷಾಸಂಪರ್ಕ ಹೊಂದಿದಂಥ ತಂದೆ ತಾಯಿಗಳು ನನಗಿದ್ದರು. ನನ್ನ ತಂದೆ ತಾಯಿಗಳ ಧಾರ್ಮಿಕ ನಿಲ್ಲುವಿಕೆಯ ಪ್ರಶ್ನೆಯನ್ನು ನನಗಾಗಲಿ, ನನ್ನ ಅಣ್ಣನಾದ ಜಿಮ್‌ಗಾಗಲಿ, ನನ್ನ ಸಹೋದರಿಯಾಗಲೀ ಎಂದಿಗೂ ಸಂದೇಹಿಸಲಿಲ್ಲ. ನನ್ನ ಮನೆಯ ಬೈಬಲ್ ಅದು ಪುಸ್ತಕದ ಗೂಡಿನಲ್ಲಿ ಇಡುವ ಪುಸ್ತಕವಾಗಿರದೆ, ಅದನ್ನು ಉಪಯೋಗಿಸುವಂಥ ಸ್ಥಿತಿಯಲ್ಲಿಯೇ ಇಡಲಾಗಿತ್ತು, ಸಭೆಗೆ ಹೋಗುವಂಥದ್ದು, ಕಾಲಕ್ಕೆ ನಿಗದಿಯಾದ ಪದ್ಧತಿಯಾಗಿರದೇ ನಮ್ಮ ಜೀವನದ ಲಯಬದ್ಧ ಕಾರ್ಯವಾಗಿತ್ತು, ಸೋಮವಾರ ಬಟ್ಟೆಯನ್ನು ತೊಳೆಯೇ ಬೇಕು ಎಂಬ ಕಾರ್ಯದಂತಿತ್ತು.[17]

ನಮ್ಮನ್ನು ತಂದೆ ತಾಯಿಗಳು ನೀತಿ ಶಿಕ್ಷೆಗೆ ... ಒಳಪಡಿಸುವಾಗ, ನಾವು ಪುನಃ ಸಹಕಾರಕ್ಕೆ ಒಳಪಡಬೇಕು. "ಮೂರ್ಖನು ತಂದೆಯ ಶಿಕ್ಷೆಯನ್ನು ತಿರಸ್ಕರಿಸುವನು ಗದರಿಕೆಯನ್ನು ಗಮನಿಸುವವನು ಜಾಣನು" (ಜ್ಞಾನೋಕ್ತಿ 15:5; ಮತ್ತು 12:1). ನಾನು ಬೆಳೆದು ಬಲವಾದ ಕ್ರೈಸ್ತನಾಗಿರಬೇಕೆಂದು ನನ್ನ ತಂದೆತಾಯಿಗಳು ನನ್ನನ್ನು ನೀತಿ ಶಿಕ್ಷೆಗೆ ಒಳಪಡಿಸಿದರೂ, ಇದು ಅವರು ನನ್ನ ಮೇಲೆ ತೋರಿಸುವ ಪ್ರೀತಿಯಾಗಿದೆ.

ಇಬ್ರಿಯ ಬರಹಗಾರನುಈ ರೀತಿಯಾದ ವಾಖ್ಯಾನವನ್ನು ಮಾಡಿದ್ದಾನೆ. "ಕರ್ತನು ತಾನು ಪ್ರಿತಿಸುವವರನ್ನೇ ಶಿಕ್ಷಿಸುತ್ತಾನೆ" ಮತ್ತು ತಾನು ಶಿಕ್ಷಿಸಿದವರನ್ನು ದೇವರು ಪ್ರೀತಿಸುತ್ತಾನೆ (ಇಬ್ರಿಯ 12:6ಎ), ಮತ್ತು ಆತನು ನಮ್ಮ ದೈಹೀಕ ತಂದೆಗೂ ಪರಲೋಕದ ತಂದೆಗೂ ಒಂದು ನೇರವಾದ ಹೋಲಿಕೆಯನ್ನು ಮಾಡಿದ್ದಾನೆ: "ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಯನ್ನು ನಾವು ಸನ್ಮಾನಿಸುತ್ತೇವೆ" (ವಚನ 9ಎ). ನಂತರ, ಶಿಸ್ತಿನ ಕುರಿತಾಗಿ ಸಾಧಾರಣವಾದ ಅವಲೋಕನವನ್ನು ಮಾಡಿದ್ದಾನೆ: "ಸಕಲವಿಧವಾದ ಶಿಕ್ಷಣವೂ ತಾತ್ಕಾಲಿಕವಾಗಿ ಸಂತೋಷಕರವಾಗಿರುವದಿಲ್ಲ, ಆದರೆ ದುಃಖಕರಸವಾಗಿರುತ್ತದೆ [ಎಲ್ಲಾ ಮಕ್ಕಳು ಮತ್ತು ಬಾಲರು "ಆಮೇನ್!" ಎಂಬುದಾಗಿ ಹೇಳುವದನ್ನು ನಾನು ಕೇಳಿಸಿಕೊಳ್ಳುತ್ತೇನೆ]; ಇದರ ತರಬೇತಿಯ ಮುಖಾಂತರ, ಹಾದು ಬಂದವರು ಅಂತ್ಯದಲ್ಲಿ ನೀತಿಯ ಫಲವಾದ ಸಮಾದಾನವನ್ನು ತೋರುವರು (ವಚನ 11).

ಬಾಲ್ಯಾವಸ್ಥೆಯಲ್ಲಿ ಇರುವವರೆ, ಇಂಥ ಚಿಂತನೆಯ ಶಿಸ್ತನ್ನು ನೀಡುವ ತಂದೆ ತಾಯಿಗಳನ್ನು ನೀವು, ಹೊಂದಿರುವದಾದರೆ ದೇವರಿಗೆ ಸ್ತೊತ್ರ ಮಾಡಿರಿ. ತಂದೆ ತಾಯಿಗಳಿಗೆ ಸಹಕಾರವನ್ನು ನೀಡುವ ಹಂಗಿನಲ್ಲಿದ್ದೇವೆ.

## ಉತ್ತಮವಾದದ್ದು

ನಾವು ನಮ್ಮ ತಂದೆ ತಾಯಿಗಳಿಗೆ ನಾವು ಸಾಧ್ಯವಾದಷ್ಟು ಉತ್ತಮವಾದ ಮಗನು - ಮಗಳಾಗುವ ಹಂಗಿನಲ್ಲಿದ್ದೇವೆ. ನಾವು ಬಾಯಿ ಮಾತಿನಿಂದ ಎಷ್ಟು ಸನ್ಮಾನಿಸಿದರೂ, ನಾವು ಸರಿಯಾದ ರೀತಿಯಲ್ಲಿ ಜೀವಿಸದೆ ಹೋದರೆ, ನಾವು ಸನ್ಮಾನ ಸಲ್ಲಿಸುವವರಲ್ಲ. ಯಾಕೋಬನ ಮಕ್ಕಳ ಕ್ರಿಯೆಗಳು ಸರಿಯಿಲ್ಲದೆ ಇರುವಾಗ, "... ನನ್ನ ಹೆಸರು ದುರ್ವಾಸನೆಯಾಗುವಂತೆ ಮಾಡಿ ನನ್ನನ್ನು ಅಪಾಯಕ್ಕೆ ಗುರಿಮಾಡಿದ್ದೀರಿ ..." (ಆದಿಕಾಂಡ 34:40; KJV). ಏಸಾವನ "ದೆಸೆಯಿಂದ ಇಸಾಕನಿಗೂ ರೆಬೆಕ್ಕಳಿಗೂ ಮನೋವ್ಯಥೆಯುಂಟಾಯಿತು" (ಆದಿಕಾಂಡ 26:35; ಮತ್ತು 27:46ನ್ನು ನೋಡಿರಿ). ಈ ಮೊದಲು ಧರ್ಮೋಪದೇಶಕಾಂಡ 21ನ್ನು ಗಮನಿಸಿದ್ದೇವೆ. ಈ ವಿಷಯವನ್ನು ತಂದೆ ತಾಯಿಗಳು ಒಪ್ಪಿಕೊಂಡಾಗ, ಅವರ ಮನೋ ವೇದನೆ ಏನು ಎಂದು ಅರ್ಥವಾಗುವದಿಲ್ಲವೇ, "ಈ ನಮ್ಮ ಮಗನು ನಮ್ಮ ಮಾತನ್ನು ಕೇಳುವದೇ ಇಲ್ಲ, ಆಜ್ಞೆಗೆ ಒಳಗಾಗುವದಿಲ್ಲ; ಇವನು ಮೊಂಡ ಕುಡಿಕ ತುಂಟ" (ಧರ್ಮೋಪದೇಶ ಕಾಂಡ 21:20ಬಿ)?

ಮಕ್ಕಳಾದಂಥ ನಾವು ಕ್ರೈಸ್ತರಾಗುವ ಮೂಲಕ, ವ್ಯಯಕ್ತಿಕವಾದಂಥ ರಕ್ಷಣೆಯನ್ನು ಹೊಂದಿ ನಂಬಿಕೆಯಿಂದ ಕ್ರೈಸ್ತರಾಗಿ - ನಮ್ಮ ಸಾಮರ್ಥ್ಯಕ್ಕೆ ಸರಿಯಾಗಿ ಜೀವನವನ್ನು ಜೀವಿಸುವರಾಗಿ, ಯೌವನ ಕಾಲದಲ್ಲಿ ಉತ್ತಮರಾಗಿ ಜೀವಿಸುವುದೇ ನಾವುಗಳು ನಮ್ಮ ತಂದೆ ತಾಯಿಗಳಿಗೆ ತೋರಿಸುವಂಥ ಸನ್ಮಾನವಾಗಿರುತ್ತದೆ. "ಒಬ್ಬ ಹುಡುಗನು ಶುದ್ಧವೂ ಸತ್ಯವೂ ಆದ ನಡತೆಯಿಂದಲೇ ತನ್ನ ಗುಣವನ್ನು ತೋರ್ಪಡಿಸಿಕೊಳ್ಳುವನು" (ಜ್ಞಾನೋಕ್ತಿ 20:11ಎ; KJV). ವೃದ್ಧ್ಯಾಪಕ್ಕಾಗಿ ನಾವು ನಂಬಿಗಸ್ತರಾಗಿರಬೇಕು. ಒಂದು ವೇಳೆ ತಂದೆ ತಾಯಿಗಳು ಮೃತರಾಗಿದ್ದರೂ ಸಹ ನಾವು ಉತ್ತಮರಾಗಿರಬೇಕು; ಅವರ ನೆನಪಿನಾರ್ಥ ನಾವು ನಂಬಿಗಸ್ತರಾಗಿರಬೇಕು. ಒಂದು ವೇಳೆ ತಂದೆ ತಾಯಿಗಳು ಕ್ರೈಸ್ತರಲ್ಲದಿದ್ದರು (ಕ್ರೈಸ್ತರಾಗಿಲ್ಲದ್ದಿದ್ದರೂ) ನಾವು ಉತ್ತಮರೇ, ಆಗಿರಬೇಕು. ಒಂದು ವೇಳೆ ಅವರು ಜೀವದಿಂದ ಇದ್ದರೆ, ನಮ್ಮ ಸಧರ್ಮದಿಂದ ಅವರನ್ನು ಕ್ರೈಸ್ತರನ್ನಾಗಿ ಮಾಡಬೇಕು (1 ಪೇತ್ರ 5:1-4). ಅವರು ಬದುಕಿಲ್ಲದಿದ್ದರೂ, ನಾವು ಸತ್ಯವನ್ನು ಯಾಥಾರ್ಥವಾಗಿ ಪಾಲಿಸುತ್ತ ಅವರಿಗೆ ಚಿರರುಣಿಗಳಾಗಿರಬೇಕು.

ನಮ್ಮ ಉತ್ತಮವಾದ ಜೀವಿತವನ್ನೇ ಅವರಿಗೆ ಸಮರ್ಪಿಸುವವರಾಗಿದ್ದೇವೆ.

## ಅವರನ್ನು ಪ್ರೀತಿಸುವದರಲ್ಲಿ ನಾವು ಮುಂದುವರಿಯಬೇಕು

ನಮ್ಮ ತಂದೆ ತಾಯಿಗಳ ಜೀವನ ಪರ್ಯಂತರ, ನಾವು ಅವರನ್ನು ಪ್ರೀತಿಸುವವರೂ, ಅನುಕಂಪ ತೋರಿಸುವವರೂ ಆಗಿರಬೇಕು. ನಾನು ಇಲ್ಲಿ ದಾಖಲು ಮಾಡಿರುವ ಪಾಠಗಳು, ಪ್ರಾಥಮಿಕವಾಗಿ ಇನ್ನೂ ಮನೆಯಲ್ಲೆ ಇರುವ ಮಕ್ಕಳಿಗೆ ಅನ್ವಯಿಸುತ್ತವೆ (ಬಾಲ್ಯಾವಸ್ಥೆಯಲ್ಲಿರುವವರಿಗೆ), ಆದರೆ ಇದರಲ್ಲಿರುವ ಹೆಚ್ಚಿನ ಪಾಠಗಳು ಜೀವನ ಪರ್ಯಂತರ ನಮಗೆಲ್ಲರಿಗೂ ಸಹಾಯಕರವಾಗುತ್ತದೆ. ನಾವು ಜೀವಿಸಿರುವವರೆಗೆ, ನಮ್ಮ ಮೆಚ್ಚುಗೆ, ನಮ್ಮ ಸನ್ಮಾನ, ಕರುಣೆಯ ತಿಳುವಳಿಕೆ, ಉತ್ತಮವಾದ ಯೌವನಸ್ಥ ಯೌವನಸ್ಥೆಯರಾಗಿ ಬದುಕುವಂತಹ ಪ್ರಯತ್ನ ಇವೆಲ್ಲವೂ ನಮ್ಮ ತಂದೆ ತಾಯಿಗಳಿಗೆ ಮೀಸಲಾಗಿರುತ್ತವೆ.

ಈಗಾಗಲೇ ಬೆಳೆದವರಿಗಾಗಿ ಈ ಪಾಠಗಳು ಬೋಧಿಸಲ್ಪಟ್ಟಿದೆ. ನಮ್ಮ ಪ್ರೀತಿ ಮತ್ತು ಅನುಕಂಪವನ್ನು ಅವರ ಜೀವನ ಪರ್ಯಂತರ ನಾವು ತೋರಿಸಬೇಕು. ಇದನ್ನು ನಮ್ಮ ಮಾತುಗಳ ಮೂಲಕ ಸಂದಾಯ ಮಾಡಬೇಕು. ಮುಖಾಮುಖಿಯಾಗಿ ಮಾತನಾಡುವ ಮಾಲಕ, ಟೆಲಿಫೋನಿನ ಮೂಲಕ, ಪತ್ರ ವ್ಯವಹಾರದ ಮೂಲಕ ಹಾಗೂ ಕ್ರಿಯೆಯ ಮೂಲಕ ತೋರ್ಪಡಿಸಬೇಕು.

ಇದು ತಂದೆ ತಾಯಿಗಳು ವೃದ್ಧರಾಗುವಾಗ ನಾವು ತೋರುವ ಪ್ರೀತಿಯ ಒಂದು ಭಾಗವಾಗಿರುತ್ತದೆ. ಈ ಮೊದಲು ನಾನು ತಿಳಿಸಿರುವ ಹಾಗೆ 1 ತಿಮೊಥೆ 5:8: "ಯಾವನಾದರೂ ಸ್ವಂತ ಜನರನ್ನು ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ." ಇದನ್ನು ನಾನು ತಂದೆ ತಾಯಿಗಳಿಗೆ ಅಳವಡಿಸುತ್ತೇನೆ - ಹಾಗೂ ಸಾಮಾನ್ಯವಾದ ಅಳವಡಿಕೆಯನ್ನು ಸಹ ಮಾಡಿಕೊಳ್ಳಬಹುದು - ಯೌವನಸ್ಥ ಮಕ್ಕಳು ವೃದ್ಧ್ಯಾಪ್ಯಕ್ಕೆ ಹೋಗುತ್ತಿರುವ ತಂದೆ ತಾಯಿಗಳನ್ನು ಸಂರಕ್ಷಿಸುವ ಕುರಿತಾಗಿಯೂ ಈ ವಾಕ್ಯವು ತಿಳಿಸುತ್ತಿದೆ.[18]

ಒಂದು ಸಾರಿ ಯೇಸು ಜನರಿಗೆ ಬೋಧಿಸುತ್ತಿರುವಾಗ, ಸದ್ದುಕಾಯರೂ ಪರಿಸಾಯರೂ ಆತನ ಬಳಿಗೆ ಬಂದು, "ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರದಾಯವನ್ನು ಯಾಕೆ ಮೀರುತ್ತಾರೆ?" (ಮತ್ತಾಯ 15:2ಎ).

> ನೀವು ಸಹ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು ಯಾಕೆ ಮೀರುತ್ತೀರಿ? ಹೇಗಂದರೆ ತಂದೆ ತಾಯಿಗಳನ್ನು ಸನ್ಮಾನಿಸಬೇಕೆಂತಲೂ ತಂದೆಯನ್ನಾಗಲಿ

ತಾಯಿಯನ್ನಾಗಲಿ ದೂಷಿಸುವವನಿಗೆ ಮರಣದಂಡನೆ ಆಗಬೇಕಂತಲೂ ದೇವರು ಹೇಳಿದ್ದಾನೆ. ನೀವೂ ಯಾವನಾದರೂ ತನ್ನ ತಂದೆಯನ್ನಾಗಲಿ ತಾಯಿಯನ್ನಾಗಲಿ ನೋಡಿ - ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ದೇವರಿಗಾಗಿ ಇಟ್ಟಿದ್ದೇನೆ ಎಂದು ಹೇಳುವದಾದರೆ ಅವನಿಗೆ ತನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕಾದದ್ದಿಲ್ಲ ಅನ್ನುತ್ತೀರಿ. ಹೀಗೆ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದೀರಿ. ಕಪಟಿಗಳೇ, ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿ ಸಿದ್ದಾನೆ; ಅವನು ಬರೆದದ್ದೇನಂದರೆ (ಮತ್ತಾಯ 15:3-7).

ಸದ್ದುಕಾಯರೂ ಮತ್ತು ಪರಿಸಾಯರು ಈ ಕೆಳಗೆ ಕಾಣಿಸಿದ ವಾಕ್ಯದ ಮೂಲಕ ವಾಗಿ ತಮ್ಮ ತಂದೆ ತಾಯಿಗಳಿಗೆ ಃಋಣವನ್ನು ತೀರಿಸಬಹುದು ಎಂದು ಪುನಃ ಸವಾಲನ್ನು ಹೇಳಿದರು, "ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ಕೊರ್ಬಾನ್ ಮಾಡಿದ್ದೇನೆ (ದೇವರಿಗೆ ನೀಡಿದ್ದೇನೆ ಎಂಬುದಾಗಿ)" (ಮಾರ್ಕ 7:11ಬ). ಇಬ್ರಿಯ ಭಾಷೆಯಲ್ಲಿ *"ಕೊರ್ಬಾನ್"* ಅಂದರೆ "ಸಮೀಪಕ್ಕೆ ತೆಗೆದುಕೊಂಡು ಬಂದದ್ದು"; ಎಂಬುದಾಗಿ ದೇವರ ಆಲಯಕ್ಕೆ ನೀಡುವ ಕಾಣಿಕೆಯನ್ನು *ಕೊರ್ಬಾನ್*[19] ಎಂದು ಕರೆಯುತ್ತಾರೆ.

ಈ ಪದವು [ಕೊರ್ಬಾನ್] ಧಾರ್ಮಿಕವಾದ ಆಣೆ ಎಂಬುದಾಗಿದೆ. ಜವಾಬ್ದಾರಿ ಹೊರಲು ಅಸಾಧ್ಯವಾದ ಯೆಹೋದಿಯು ಇದನ್ನು ದೇವರಿಗೆ ನೀಡಬಹುದಾಗಿದೆ. (ದೇವಾಲಯಕ್ಕೆ) ಸಂಪಾದನೆಯ ಹಣವು ತಂದೆ ತಾಯಿಗಳಿಗೆ ಸಂಧಾನವಾಗಬೇಕು. ಹೇಗೂ ಆ ಹಣವು ಧಾರ್ಮಿಕ ಕ್ರಿಯೆಗಳಿಗೆ ನೀಡಲೇಬೇಕು ಎಂಬ ನಿಯಮಗಳಿಲ್ಲ. ಆದರೆ ಧರ್ಮಶಾಸ್ತ್ರದಲ್ಲಿ ತಿಳಿಸಿರುವ ನಿಯಮದಂತೆ ಒಬ್ಬನು ತಂದೆ ತಾಯಿಗಳ ಹಾಗೂ ಮಕ್ಕಳ ಜವಾಬ್ದಾರಿಯನ್ನು ಹೊರಲೇ ಬೇಕಾದ ನಿಯಮ "ಕೋರ್ಬಾನ" ಆಗಿರುತ್ತದೆ. ಒಂದು ವೇಳೆ ಈ ಆಣೆಯನ್ನು ಏರು ಧ್ವನಿಯಲ್ಲಿ ಉಚ್ಚರಿಸುವದಾಗಿದ್ದರು, ಅದ ಕೊರ್ಬಾನ್ ಆಣೆಗೆ ನಿಂದನೆಯಾಗುತ್ತಿತ್ತು ಎಂದು ಶಾಸ್ತ್ರಿಗಳು ಹೇಳುತ್ತಿದ್ದರು.[20]

ಆದರೆ ಪ್ರೀತಿ ಕರುಣೆಯಿಲ್ಲದ ಯಾವುದೇ ಕ್ರಿಯೆಯು, ಮತ್ತು ಮಾನವೀಯ ಸನ್ಮಾನವಿಲ್ಲದ ಸಾಂಪ್ರದಾಯಗಳನ್ನು ಯೇಸು ಖಂಡಿಸಿದ್ದಾನೆ. ಬ್ಯಾಟ್‌ಸೆಲ್ ಬ್ಯಾರೆಟ್ ಬಾಕ್ಸರ್ ಈ ರೀತಿ ಬರೆದಿದ್ದಾರೆ,

ಹೆಚ್ಚು ಸಭೆಗೆ, ಹಾಜರಾಗುವಂಥ ವಿಷಯವಾಗಲೀ, ಹೆಚ್ಚು ಹಣವನ್ನು ಸಭೆಗೆ ನೀಡುವ ವಿಷಯವಾಗಲೀ ತಂದೆತಾಯಿಗಳನ್ನು ಸನ್ಮಾನಿಸುವ ವಿಷಯಕ್ಕೆ ಪರ್ಯಾಯ ವಾಗದು.

ಪ್ರಗತಿಪರವಾದ ಯುಗದಲ್ಲಿದ್ದೇವೆ ಎಂಬುದಾಗಿ ತಿಳಿದಿರುವ ನಾವು ನಮ್ಮ ಸಾಮಾಜದಲ್ಲಿ ಇನ್ನೂ ಬದುಕಿರುವ ತಂದೆ ತಾಯಿಗಳ ನ್ನು ಅಲಕ್ಷಮಾಡಿರುವದು ಘೋರ ಅಘಾತವಾಗಿದೆ. ವೈಜ್ಞಾನಿಕ ತಂತ್ರಜ್ಞಾನವು ಜನಸಂಖ್ಯೆಯ ಆಯುಷ್ಯವನ್ನು ಶೇಕಡವಾರು ಅರವತ್ತೈದನ್ನು ದಾಟುವಂತೆ ಮಾಡಿರುತ್ತವೆ. ಇನ್ನೂ ಮುಂದುವರಿಯುತ್ತಿದೆ ಆದರೆ, ಈ ಅಲಕ್ಷಕ್ಕೆ ಒಳಗಾದ, ಮರೆತು ಹೋಗಿರುವ, ಲೆಕ್ಕಕ್ಕೆ ಇಲ್ಲದ, ವೃದ್ಧರ ಸಮಸ್ಯೆಯನ್ನು ವೈಜ್ಞಾನಿಕ ತಂತ್ರವು ಪರಿಹರಿಸಲಾರದು. ನಮ್ಮ ಮನಸಾಕ್ಷಿಯಲ್ಲ ಕರ್ತನಾದ ಯೇಸು ಕ್ರಿಸ್ತನ ಕುರಿತಾದ ಸಂಬಂಧದ ವಿಷಯದಲ್ಲಿ, ಎಚ್ಚರಗೊಳ್ಳುವುದೇ ಇದಕ್ಕೆ ಪರಿಹಾರ ವಾಗಿದೆ.[21]

## ಮುಕ್ತಾಯ

ತಂದೆ ತಾಯಿಗಳನ್ನು ಕದ್ದುಕೊಳ್ಳುವ ವಿಷಯದಲ್ಲಿ ಜ್ಞಾನೋಕ್ತಿ 28:24 ಈ ರೀತಿ ತಿಳಿಸುತ್ತದೆ. ದೋಷವಲ್ಲವೆಂದು ತಾಯಿತಂದೆಗಳ ಧನವನ್ನು ಕದಿಯುವವನು ಕೇಡಿಗನಿಗೆ

ಜೊತೆಗಾರನು ನಾವುಗಳು ಯಾರು ಸಹ ಇಂತಹ ಒಂದು ಪಾಪ ಪ್ರಜ್ಞೆಗೆ ಒಳಗಾಗಬಾರದು - ಆದರೆ ತಂದೆ ತಾಯಿಗಳಿಗೆ ಸಲ್ಲುವಂಥದ್ದನ್ನು ನಾವು ಸಲ್ಲಿಸದೆ ಹೋದರೆ? ಅವರನ್ನು ನಾವು ಮೆಚ್ಚದೆ ಹೋದರೆ, ಸನ್ಮಾನಿಸದೇ ಹೋದರೆ, ವಿಧೇಯರಾಗದೆ ಹೋದರೆ, ಅನುಕಂಪದ ತಿಳುವಳಿಕೆ ಇಲ್ಲದೆ ಹೋದರೆ, ಅವರಿಗೆ ಸಹಕಾರ ಸಲ್ಲಿಸದಿದ್ದರೆ? ಅವರಿಗೆ ಉತ್ತಮ ರಾದ ಮಕ್ಕಳಾಗದೇ ಇದ್ದರೆ? ಅವರ ಜೀವನ ಪರ್ಯಾಂತರ ಅವರಿಗೆ ನೀಡಬೇಕಾದ ಪ್ರೀತಿ ಆದರಣೆಯನ್ನು ನೀಡದಿದ್ದರೆ, ಅಮೂಲ್ಯವಾದ ಚಿನ್ನವನ್ನು ಕದ್ದುಕೊಳ್ಳವದಕ್ಕಿಂತಲೂ, ಈ ವಿಷಯ ಕೆಟ್ಟದಲ್ಲವೇ?

ಪ್ರಾರ್ಥನೆಯಿಂದ ಈ ಪಾಠವನ್ನು ಮುಕ್ತಾಯ ಮಾಡೋಣ:

> *ದೇವರೇ, ಮದುವೆ ಮತ್ತು ಕುಟುಂಬದ ವಿಷಯದಲ್ಲಿ ನೀನು ನೀಡಿರುವ ನಿನ್ನ ತಿಳುವಳಿಕೆಗಾಗಿ, ನಿನ್ನನ್ನು ಸ್ತುತಿಸುತ್ತೇವೆ. ಇದರಿಂದ ನಮಗೆ ಉಂಟಾದ ಆಶೀರ್ವಾದ ಕ್ಕಾಗಿ ನಿನಗೆ ಸ್ತೋತ್ರ ನಾವು ಉತ್ತಮವಾದ ಗಂಡಂದಿರು, ತಂದೆಯರು, ಹೆಂಡತಿಯರು, ತಾಯಿಯರು ಮತ್ತು ಮಕ್ಕಳು ಆಗಿರುವಂತೆ ಸಹಾಯಿಸು. ನಮ್ಮ ಮೂರ್ಖಸ್ವಭಾವಕ್ಕಾಗಿ - ನಿನ್ನ ವಿವೇಕವನ್ನು ಅವಲಂಭಿಸಿದ್ದೇವೆ. ನಮ್ಮಲ್ಲಿರುವ ಅಸಹನೆಗಾಗಿ - ನಿನ್ನ ತಾಳ್ಮೆ ಯನ್ನು ಅವಲಂಭಿಸಿದ್ದೇವೆ. ನಮ್ಮ ಬಲಹೀನತೆಯಲ್ಲಿ ನಿನ್ನ ಬಲವನ್ನು ಆಶ್ರಯಿಸಿದ್ದೇವೆ. ನಮ್ಮ ಸಕಲ ಮನೆಗಳಲ್ಲಿ ನಿನಗೆ ಮಹಿಮೆಯಾಗಲಿ, ಯೇಸುವಿನ "ಅಮುಲ್ಯ ನಾಮದಲ್ಲಿ" ಬೇಡುತ್ತೇನೆ, ಆಮೆನ್.*[22]

---

ಟಿಪ್ಪಣಿಗಳು

[1]ಕೆಲವು ಸಾರಿ ನಾನು ಇದನ್ನು "ತಂದೆಗೆ ನಾವು ಸಲ್ಲಿಸಬೇಕಾದ ಏಳು ಸಾಲಗಳು" ಮತ್ತು "ತಾಯಿಗೆ ಸಲ್ಲಿಸಬೇಕಾದ ಏಳು ಸಾಲಗಳು" ಎಂದು ಬೋಧಿಸುತ್ತೇನೆ. [2]ಇನ್ನೂ ತಂದೆತಾಯಿಗಳ ಜೊತೆಯಲ್ಲಿ ಜೀವಿಸುತ್ತಿರುವ ಮಕ್ಕಳಿಗೆ ಇದು ಪ್ರಾಥಮಿಕವಾಗಿ ಹೇಳಲಾಗಿದೆ. ಕೊನೆಯ ಪಾಠದಲ್ಲಿ, ಇದನ್ನು "ಎಲ್ಲಾ ಮಕ್ಕಳಿಗೂ" ಸಾಮಾನ್ಯವಾದ ಬೋಧನೆಯಾಗಿರುತ್ತದೆ. [3]ಕೆಲವು ತಂದೆ ತಾಯಿಗಳು ಒಳ್ಳೆಯವರಾಗಿರುವದಿಲ್ಲ, ಬೆಂಕಿಸುವದಿಲ್ಲ ಇದು ನಿಯಮಕ್ಕೆ ವಿರುದ್ಧ ವಾದದ್ದೆ ಬಹಳಷ್ಟು ಅಥವ ಎಲ್ಲಾ ಒಳ್ಳೆ ತಂದೆ ತಾಯಿಯರನ್ನೆ, ಹೊಂದಿದ ಕೇಳುಗರು ಇಲ್ಲಿದ್ದಾರೆ, ಮತ್ತು ಅವರು ಉತ್ತಮವಾದದ್ದನ್ನೇ ನಮಗೆ ಮಾಡಿದ್ದಾರೆ. [4]ಯು, ಎಸ್ ಹೊರಗಡೆ ಇದನ್ನು ಉಪಯೋಗಿಸುವುದಾದರೆ, ವಿವಿಧ ದೃಷ್ಟಾಂತವನ್ನು ಉಪಯೋಗಿಸಬಹುದು. ಮಕ್ಕಳು ಹುಟ್ಟಿದ ಪರಿಸ್ಥಿತಿಗಿಂತಲೂ ತಂದೆ ತಾಯಿಗಳು ಅವರನ್ನು ಉತ್ತಮವಾದ ಪ್ರಪಂಚಕ್ಕೆ ನಡಿಸಿದ್ದಾರೆ. [5]Quoted by Batsell Barrett Baxter, *Christ and Your Home* (Abilene, Tex.: Herald of Truth, 1974), 35-36. [6]ದೇವರು ನಮ್ಮನ್ನು ಪ್ರೀತಿಸಿ ನಮಗಾಗಿ ತನ್ನ ಮಗನನ್ನು ಕೊಟ್ಟದ್ದು, ದೇವರು ನಮ್ಮ ಮೇಲೆ ಇಟ್ಟಿರುವ ಪ್ರೀತಿಯ ಸಿದ್ಧಾಂತವಾಗಿರುತ್ತದೆ, ಒಂದು ವೇಳೆ ಯಾವುದೇ ಮೆಚ್ಚುಗೆಯನ್ನು ಜನರು ನಮ್ಮ ಮೇಲೆ ತೋರ್ಪಡಿಸದಿದ್ದರೂ, ನಾವು ಸೂಚಿಸಲೇ ಬೇಕು ಎಂದು ದೇವರ ವಾಕ್ಯವು ತಿಳಿಸುತ್ತದೆ (ಎಫೆಸ 1:16; 1 ಥೆಸಲೋನಿಕ 5:12). [7]KJVಯಲ್ಲಿರುವ "ಭಯದ" ಪದದ ಅರ್ಥ ನಾವು ಈಗಾಗಲೇ ಅನೇಕ ಸಾರಿ ತಿಳಿಸಿದ ಹಾಗೆ "ಮಾನ್ಯತೆ, ಹಾಗೂ "ಆಳವಾದ ಸನ್ಮಾನ" ಎಂಬುದಾಗಿದೆ. [8]KJV "ಬೆಳಕನ್ನು ಕೊಡುತ್ತಾನೆ" ಎಂಬುದರ ಅರ್ಥ "ಬೆಳಕಿನಿಂದ ನಮ್ಮನ್ನು ಪೋಷಿ&ಸುತ್ತಾನೆ" (ಅಗೌರವ). [9]ತಂದೆಯು ಮತ್ತನಾಗಿರುವಾಗ ಹಾಮನು ಅವನ ತಂದೆಗ ಅಗೌರವ ಸೂಚಿಸಿದನು. [10]Eleanor Roosevelt was the wife of Franklin D. Roosevelt, the thirty-second president of the U.S. (1933-45).

[11]ಬಾಕ್ಸ್‌ಟರ್ ಅವರಿಂದ ತಿಳಿಸಲಾಗಿದೆ 33. [12]Ibid. [13]Ibid. [14]Ibid., 35. [15]ಮಕ್ಕಳನ್ನು ಕ್ರಮಪಡಿಸುವದು ತಂದೆಯ ಆದ್ಯಕರ್ತವ್ಯವಾಗಿದ್ದರೂ ತಾಯಿಯು ಇದರಲ್ಲಿ ಸಹಕರಿಸಬೇಕು. [16]ಅವರ ಸಕಲ ಸೂಚನೆಗಳು, ದೇವರ ವಾಕ್ಯದ ಸಲಹೆಯ ಮೇರೆಗೆ ಇತ್ತು. ಎಲ್ಲಾ ಬೋಧನೆಗಳನ್ನು, ದೇವರ ವಾಕ್ಯದಿಂದ ಪರೀಶೋಧಿಸಬೇಕು. [17]ಬಾಕ್ಸ್‌ಟರ್‌ನಲ್ಲಿ ತಿಳಿಸಲಾಗಿದೆ, 38. [18]ಮಕ್ಕಳು ಇನ್ನೂ ಇತರೆ ಕುಟುಂಬದ ವೃದ್ಧರನ್ನು ಪೋಷಿಸುವ ಕುರಿತಾಗಿದೆ. [19]ಮತ್ತಾಯ 27:6 ಕೊರ್ಬಾನ್ ಅಂದರೆ "ಖಜಾನೆ" ಎಂದು ತರ್ಜುಮೆಮಾಡಲಾಗಿದೆ. [20]Kenneth L. Barker, gen. ed., *The NIV Study Bible* (Grand Rapids, Mich.: Zondervan Publishing House, 1985), 1507.

[21]ಬಾಕ್ಯಟರ್, 37-38. [22]ಮದುವೆ ಹಾಗೂ ಕುಟುಂಬದ ವಿಷಯದಲ್ಲಿ, ಪ್ರಸಂಗಿಸುವಾಗ ಪ್ರಾಥಮಿಕ ಆಹ್ವಾನವನ್ನು ನಾನು ನೀಡುತ್ತೇನೆ, ಮನೆ ಎಂದರೆ ಕ್ರೈಸ್ತರ ಮನೆ ಅದರ ಅರ್ಥ ಕುಟುಂಬದ ಸದಸ್ಯರೆಲ್ಲರೂ ನಂಬಿಗಸ್ತರಾದ ಕ್ರೈಸ್ತರಾಗಿರಬೇಕು, ಕ್ರೈಸ್ತರಾಗುವದಕ್ಕೂ ಮತ್ತು ಒಪ್ಪಿಸಿಕೊಡುವದಕ್ಕೂ ಕರೆ ನೀಡುತ್ತೇವೆ.